# ಚಿಂತನೆ

ಎಲ್ಲರ ಜೀವನದ ಮಾರ್ಗದ ಅರ್ಥ ತಿಳಿದು
ಸಾಮಾನ್ಯ ಜೀವನ ಜ್ಞಾನದಲ್ಲಿ ಬೆರೆತು
ಭರವಸೆಯನ್ನು ಅನುಸರಿಸುತ್ತಾ ಮುನ್ನಡೆ !

- ಶ್ರೀ ಹರಿ.

www.sriharikhoday.com

# ಚಿಂತನೆ

ಶಾಂತಿ ತುಂಬಿಕೊಂಡಿರುವ
ಮೌನದ  ಮಾತುಗಳ ಕೇಳಿ
ಹಿಂದಿನಿಂದ ಕಲಿ ..ಇಂದಿನಿಂದ
ಬದುಕು ಮುನ್ನಡೆಸಿಕೊಂಡು
ನಾಳೆಯ  ಸುಖಕ್ಕೆ  ಭರವಸೆ  ತುಂಬೋಣ !

- ಶ್ರೀ ಹರಿ.

www.srikarikhoday.com

# ಚಿಂತನೆ

ನಮ್ಮ ಬದುಕಿನಿಂದ ನೂರು ಜನ ಬದುಕಬೇಕು
ನಮ್ಮ ಬದುಕಿನಿಂದ ನೂರು ಜನರ
ಬದುಕಿನಲ್ಲಿ ಸಂತಸ ಮೂಡಿಸಬೇಕು
ನಮ್ಮ ಬದುಕಿನಲ್ಲಿ ನೂರು ಗಿಡ ಬೆಳೆಸಬೇಕು
ನಮ್ಮ ಬದುಕಿನಿಂದ ಸಮಾಜಕ್ಕೆ ಒಳ್ಳೆಯದಾಗಬೇಕು

- ಶ್ರೀ ಹರಿ.

www.srikarikhoday.com

# ಚಿಂತನೆ

ದುಡಿದು ಕೆಲಸ ಮಾಡಿ ಶೇಖರಿಸಿದವನಿಗೆ
ಧೈರ್ಯದಿಂದ ಮನಸ್ಸಿಗೆ ಹೆದರಿ ಜೀವಿಸುತ್ತಿರುವವನು
ತಲೆ ಎತ್ತಿ ಜೀವಿಸುವನು ಅವನು ನನ್ನಿಂದ
ಕಲಿತನೆಂಬ ಹಾಸ್ಯ ಮಾತುಗಳನ್ನಾಡುವವನು
ಒಳಗಣ್ಣು ತೆಗೆಯದೆ ಮುಚ್ಚಿಕೊಂಡಿರುವವನು !

- ಶ್ರೀ ಹರಿ.

www.srikarihoday.com

# ಚಿಂತನೆ

ಕಾಲವನ್ನು ಅಳವಡಿಸಿಕೊಂಡು
ಕ್ರಿಯಾಶೀಲ ಭಾವನೆಯಿಂದ ರೂಪಿಸಿ ಬದುಕಬೇಕು
ನಮ್ಮ ಬದುಕಿನಲ್ಲಿ ಒಳ್ಳೆಯದು ಕೆಟ್ಟದ್ದು,
ನಾವೇ ಅರಿತುಕೊಂಡು
ಬೇರೆಯವರಿಗೆ ತೊಂದರೆಯಿಲ್ಲದ್ದನ್ನು ಆರಿಸಿಕೊಳ್ಳಬೇಕು

- ಶ್ರೀ ಹರಿ.

www.srikrishnoday.com

# ಚಿಂತನೆ

ಇಂದಿನ ದಿನದ ಕ್ರಿಯೆಗಳಿಗೆ ದೀರ್ಘಾಲೋಚನೆ
ಮಾಡುವುದೇ ಕ್ರಿಯಾಶೀಲ ಬದುಕು
ಸರಿ ಬದುಕು ಬದುಕಲು ಆಸಕ್ತಿ ಇಲ್ಲದ್ದಲ್ಲಿ
ಕಾರ್ಯಗಳು ರೂಪಿಸುವುದಿಲ್ಲ

- ಶ್ರೀ ಹರಿ.

www.srikarikhoday.com

# ಚಿಂತನೆ

ನಮ್ಮ ಬದುಕಿಗೆ ನಮ್ಮದೇ ಮಾರ್ಗ ರೂಪಿಸಿಕೊಳ್ಳಬೇಕು
ಬದುಕು ನಮ್ಮ ಬದುಕಲ್ಲ, ಕ್ಷಣ ಕ್ಷಣದ
ಕಾಲದ ಬದುಕು
ವ್ಯರ್ಥಕಾಲ ಸೋಮಾರಿತನದ ಸಾಧನೆಯಾಗಿ
ಉತ್ಸಾಹ ನೀಡುವ ಕ್ರಿಯಾಶೀಲ ಭಾವನೆ
ಸೋಮಾರಿತನವನ್ನು ನುಂಗಿ ಬಿಡುವುದು

– ಶ್ರೀ ಹರಿ.

www.sriharikhoday.com

# ಚಿಂತನೆ

ಮನಸ್ಸನ್ನು ಎಂದೂ ಶುದ್ಧವಾಗಿರಿಸಬೇಕು
ಶುದ್ಧವಾದ ಮನಸ್ಸಿರಬೇಕಾದರೆ
ಹಳೆಯ ಮನಸ್ಸಿನ ತಪ್ಪುಗಳಿಗೆ ಸ್ವಚ್ಛವಾಗಿರುವ
ಹೊಸ ಹೊಸ ಮನಸ್ಸುಗಳು ಬೇಕು !

- ಶ್ರೀ ಹರಿ.

www.shrihari-today.com

# ಚಿಂತನೆ

ಕಲಿಯಲು ಮನಸ್ಸಿಲ್ಲದವನು
ನಾಚಿಕೆಯ ಅರ್ಥ ತಿಳಿದಿಲ್ಲದವನು
ನನಗೆ ಎಲ್ಲವ್ರೂ ತಿಳಿದಿದೆ, ತಿಳಿದಿದೆ ಎನ್ನುವವನು
ನನ್ನಲ್ಲಿ ಮರುಳು ಇದೆ. . ಮರುಳಿದೆ ಎಂದು ಹೇಳುತ
ತಾನು ಯಾವ ಬೆಳೆಯನ್ನೂ ಬೆಳೆಯದ
ಮರುಭೂಮಿಯಾಗಿಹನು !

– ಶ್ರೀ ಹರಿ.

www.srihariKhoday.com

# ಚಿಂತನೆ

ನಾವು ಎಲ್ಲದರಲ್ಲಿ ಸುಖ ಕಾಣೋಣ
ಬಡವನ ಬಡತನ ಗಾಳಿಗೆ ತೂರೋಣ
ನಮ್ಮ ಜೀವನದ ಜೊತೆ ಆಗಿರುವ
ಕಲ್ಪನೆಗಳಿಗೆ ಮಾನ್ಯತೆ ನೀಡೋಣ
ನಮ್ಮಲ್ಲಿರುವ ಕಲ್ಪನೆಯ ಕಲ್ಪವೃಕ್ಷಕ್ಕೆ
ಪ್ರೀತಿ-ಪ್ರೇಮಗಳ ನೀರು ಚೆಲ್ಲಿ ಬೆಳೆಸೋಣ

- ಶ್ರೀ ಹರಿ.

www.srikaritoday.com

# ಚಿಂತನೆ

ಬಾಳು ತಾನೊಬ್ಬನೇ ಬಾಳುವುದು ಬಾಳಲ್ಲ
ಬಾಳು ಉಪಯುಕ್ತವಾಗಿ ಬಾಳುವುದು
ನಮ್ಮ ಬಾಳನ್ನು ಬೇರೆಯವರಿಗೆ ತೋರಿಸುವುದು
ಜೀವನದ ದಾಖಲೆ
ಜೀವಿಸುವ ಸಮಯದಲ್ಲಿ ತೃಪ್ತಿಯಿಂದ ಜೀವಿಸುವುದು
ಕಣ್ಣಿಗೆ ಕಾಣದ ದೇವರ ಲೀಲೆ

– ಶ್ರೀ ಹರಿ.

www.srikrishnoday.com

# ಚಿಂತನೆ

ಬೆಳೆ ಬೆಳೆಯಬೇಕು . .ಆದರೆ ದುಡಿಮೆ ಬೇಡ
ಕೆಲಸ ಮಾಡಿಸಿಕೊಳ್ಳಬೇಕು, ಅವರ ಜೊತೆ ಮೈತ್ರಿ ಬೇಡ
ಸುಖ ಬೇಕು . .ಆದರೆ ಸುಖದ ಆದಿ ಬೇಡ
ಸನ್ಯಾಸಿಯ ಹೆಸರು ಬೇಕು. .
ಆದರೆ ಸುಖದ ಅನುಭವವಿಲ್ಲದ ಸನ್ಯಾಸ ಬೇಡ!

– ಶ್ರೀ ಹರಿ.

www.srikrishnodaya.com

# ಚಿಂತನೆ

ಕಲ್ಪನೆಗಳಿಗೆ ಅಗಸಧಿನನ್ನು ಅರಸಧಿನನ್ನಾಗಿ ಮಾಡಿಸುವ ಶಕ್ತಿ
ವಿಶ್ವದ ಎಲ್ಲಾ ಕೆಲಸಗಳಿಗೆ ನಾಯಕ ಕಲ್ಪನೆ
ಮನಸ್ಸಿನ ಸ್ವಪ್ನಗಳಿಗೆ. . ಸ್ವಪ್ನಗಳ ಕನಸುಗಳನ್ನು
ನನಸು ಮಾಡುವುದು ಕಲ್ಪನೆ
ಮನೋಃಶಕ್ತಿ ಮನಸ್ಸಿನ ದೃಢ ಶಕ್ತಿಯನ್ನು ಹೆಚ್ಚಿಸುವುದು ಕಲ್ಪನೆ
ತನಗೇ ತಿಳಿಯದೆ ಕಾರ್ಯರೂಪಕ್ಕೆ ತರುವ ಮಹಾನ್ ಶಕ್ತಿ

– ಶ್ರೀ ಹರಿ.

www.srihanikhodey.com

# ಚಿಂತನೆ

ಮನೋ ಗುಣಗಳು ನಮ್ಮ ಮನೋವೃತ್ತಿಯ ಆಧಾರ
ಕೆಟ್ಟದ್ದನ್ನು ಬಯಸುವವರು ಜೀವನದಲ್ಲಿ ಕಳೆದುಕೊಳ್ಳುತ್ತ
ಸುಖಗಳು ಕಳೆದುಹೋದ ಮೇಲೆ
ಅವರಿಗೆ ದೊರಕುವುದು ಬೇಸರ
ಜೀವನದಲ್ಲಿ ಎಚ್ಚರದ ದುಡಿಮೆ ಕುಂಬಾರನ ದುಡಿಮೆ

- ಶ್ರೀ ಹರಿ.

www.srihariudaya.com

# ಚಿಂತನೆ

ನಮ್ಮ ಇತಿಹಾಸವೇ ಐಶ್ವರ್ಯ . . .
ಹಳೆಯದನ್ನು ನೆನೆದು ಜೀವಿಸುವುದೇ ಐಶ್ವರ್ಯ. .
ನಮ್ಮ ಕನಸುಗಳನ್ನು ನನಸು ಮಾಡುವುದೇ ಸಂಪತ್ತು
ಇದೇ ವಿಶ್ವದಲ್ಲಿರುವ ಗಮ್ಮತ್ತು

- ಶ್ರೀ ಹರಿ.

www.sriharikhoday.com

# ಚಿಂತನೆ

ತನ್ನ ಹಸಿದ ಹೊಟ್ಟೆಗೆ ಊಟ ಬೇಕು,
ಬೇರೆಯವರ ಹಸಿದ ಹೊಟ್ಟೆಗೆ ದಾನಬೇಡ
ಸಾಕುವುದಕ್ಕೆ ತಂದೆ ತಾಯಿ ಬೇಕು,
ಬೆಳೆದ ಮೇಲೆ ತಂದೆ ತಾಯಿ ಬೇಡ
ಉಣಲು ಸಿಹಿಯಾದ ಹಣ್ಣು ಬೇಕು, ಹಣ್ಣು ಬೆಳೆಸಿದ ಸಿಪ್ಪೆ ಬೇಡ
ಮಾನವ ಸುಖವನ್ನು ಬಯಸುತ್ತ ಸುಖ ಬೆಳೆಸಿದ
ಹಾದಿಯನ್ನು ಮರೆಯುತ್ತಿದ್ದಾನೆ !

- ಶ್ರೀ ಹರಿ.

www.srikrishnoday.com

# ಚಿಂತನೆ

ತನ್ನ ಮೇಲೆ ಅಭಿಮಾನವನ್ನು ಹೆಚ್ಚಿಸಿಕೊಂಡು
ಬೇರೆಯವರ ಮೇಲೆ ಪ್ರೀತಿಯ ಅಭಿಮಾನ ಇಲ್ಲದೆ
ಬೇರೆಯವರಿಗೆ ಅಪಮಾನ ಮಾಡುವವನು
ಮಾನವನಾಗಿ ಜನ್ಮ ಪಡೆದಿದ್ದರೂ ಮಾನವನಲ್ಲ!

– ಶ್ರೀ ಹರಿ.

www.shrikhoday.com

# ಚಿಂತನೆ

ನಮ್ಮ ಮನಸ್ಸು ನಮಗೆ ಯಜಮಾನ
ಧೈರ್ಯ ತರಿಸುವ ಯಜಮಾನ
ಬ್ರಹ್ಮಾಂಡವೂ ತನ್ನದೇ ಎಂದು
ಹೆದರಿಕೆಯಿಲ್ಲದೆ ಹೇಳುವ ಯಜಮಾನ
ಕತ್ತಲು , ಸತ್ಯದ ಗುಹೆಯೊಳಗೆ ಅಡಗಿರುವ
ಐಶ್ವರ್ಯದ ಯಜಮಾನ !

- ಶ್ರೀ ಹರಿ.

www.sriharikhoday.com

# ಚಿಂತನೆ

ಸೂಜಿಯಲ್ಲಿ ದಾರ ಪೋಣಿಸಿದಂತೆ ಮುಳ್ಳಾಗಿರುವ
ಈ ಪ್ರಪಂಚದಲ್ಲಿ, ಎಲ್ಲರನ್ನು ಜೊತೆ ಸೇರಿಸುವ
ದಾರದಿಂದ  ಹರಿದು ಹೋಗಿದ್ದ ಮನಗಳನ್ನು
ದೇವರ ಜೊತೆಗೆ ಹೊಲೆದು , ಹುಚ್ಚನ್ನು  ಬಿಡಿಸಿ
ಭಗವಂತನ ಚಿಂತನೆ ಸಮಾಜ ಮಾಡುಬೇಕು

- ಶ್ರೀ ಹರಿ.

www.sriharikhoday.com

# ಚಿಂತನೆ

ತನ್ನ ಗೆಲುವಿಗೆ ಅನೇಕರು ಕಾರಣರೆಂದು
ನೆನೆದು ನಮಿಸುವುಧಿದನ್ನು ಮರೆಯಬೇಡ
ತಾತ್ಕಾಲಿಕ ಬಿರುದುಗಳು ಜೊತೆ ಬರುವುದೆಂದು
ಎಂದಿಗೂ ನೆನೆಯಬೇಡ
ನಾನು ಬೆಳೆದಿರುವುದಕ್ಕಿಂತ ಹೆಚ್ಚು ಯಾರೂ ಬೆಳೆಯರು
ಎಂಬ ತಪ್ಪು ಮಾತಿನ ಗರ್ವ ಎಂದಿಗೂ
ನಮ್ಮ ಮನಸ್ಸಿಗೆ ತರಿಸಿಕೊಳ್ಳಬೇಡ !

– ಶ್ರೀ ಹರಿ.

www.srikrishnoday.com

# ಚಿಂತನೆ

ತೃಪ್ತಿ ಇಲ್ಲದ ಜೀವನ ಜೀವನವಲ್ಲ
ತೃಪ್ತಿ ಪಡೆಯದ ಮಾನವ ಮಾನವನಲ್ಲ
ತೃಪ್ತಿ ಪಡೆದು ಬೇರೆಯವರಿಗೆ
ತೃಪ್ತಿಯನ್ನು ನೀಡದಿರುವವನು
ಉಸಿರಿನ ಬೆಲೆ ತಿಳಿದಿಲ್ಲ!

- ಶ್ರೀ ಹರಿ.

www.srikanthkhoday.com

# ಚಿಂತನೆ

ಅಸಾಧ್ಯವನ್ನು ಸಾಧಿಸುವುದು ಸಾಮರ್ಥ್ಯ
ಅಸಾಧ್ಯದ ಎದುರಿಗೆ ನಿಂತಾಗ ಹೆದರದು ಸಾಮರ್ಥ್ಯ
ನೋವನ್ನು ಎದುರಿಸಲು ಶಾಂತಿಯ ಸಾಮರ್ಥ್ಯ
ಗೆಲುವನ್ನು ಸಾಧಿಸಬಲ್ಲದು ಸಾಮರ್ಥ್ಯ

- ಶ್ರೀ ಹರಿ.

www.shrihariudaay.com

# ಚಿಂತನೆ

ಪವಿತ್ರವಾದ ಮನಸ್ಸು ನೀರಿನಂತೆ
ನೀರಿನಲ್ಲಿ ಕೆಟ್ಟದು ಬೆರೆತರೆ ಹೇಗೆ ಕೆಡುವುದೋ
ಮನಸ್ಸು ಅದೇ ರೀತಿ ಕೆಟ್ಟುಹೋಗಿ,
ಒಳ್ಳೆಯದನ್ನು ಬೆಳೆಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ

- ಶ್ರೀ ಹರಿ.

www.shriharihouday.com

# ಚಿಂತನೆ

ತಪ್ಪು ಹುಡುಕುವುದೇ ಕೆಲವರ ಕೆಲಸ
ಟೀಕೆ ಮಾಡುವುದೇ ಕೆಲವರ ಕೆಲಸ
ಬಹಿಷ್ಕರಿಸುವುದೇ ಹಲವರ ಜೀವನ
ದ್ವೇಶಿಸುತ್ತ ತುತ್ತು ತುತ್ತಲ್ಲೇ ದ್ವೇಶವ ನುಂಗುತ್ತ
ದ್ವೇಶವನ್ನು ಊಟ ಮಾಡುತ್ತ ಜೀವಿಸುತ್ತಿರುವವರು !

– ಶ್ರೀ ಹರಿ.

www.shrikhoday.com

# ಚಿಂತನೆ

ಹೊಸ ಹೊಸ ಹಾದಿಗಳನ್ನು ಹುಡುಕುತ್ತಿರುವ ನಮ್ಮ ಮನಸ್ಸಿಗೆ
ಹೊಸ ಹಾದಿಗಳು ನಮ್ಮನ್ನು ಕೂಗಿ ಕರೆಯುತ್ತಿವೆ
ಏನೂ ಮಾತನಾಡದೆ ಜಗತ್ತನ್ನು ನಡೆಸುತ್ತಿರುವ ಸೂರ್ಯನಂತೆ
ಎಲ್ಲರಿಗೂ ಸಹಾಯ ಮಾಡುತ್ತಿರುವ ಬೆಳಕಿನಂತೆ
ಆಗದು ಎಂಬ ಮಾತುಗಳನ್ನು ಮರೆತು ಆಗುವುದರಲ್ಲಿ
ಬೆರೆಯೋಣ
ಸೂರ್ಯನ ಪಯಣಕ್ಕೆ ಹೊಸ ದೆಸೆ ತೋರಿಸೋಣ

– ಶ್ರೀ ಹರಿ.

www.srikanthoday.com

# ಚಿಂತನೆ

ಕಲ್ಲಾಗಿರುವ ಮನಸ್ಸುಗಳನ್ನು
ಹೂವಿನಂತೆ ಮೃದುವನ್ನು ತರಿಸುವುದು ಕಾವ್ಯ
ಜೀವನ ರೀತಿಯನ್ನು ಯಶಸ್ಸಿಗೆ ಕೊಂಡೊಯ್ಯುವುದು ಕಾವ್ಯ
ಸಂಬಂಧಗಳು ಇಲ್ಲದೆ ಸಂಬಂಧಗಳನ್ನು
ಜೋಡಿಸುವ ಜೋಡಣೆಯೇ ಕಾವ್ಯ !

– ಶ್ರೀ ಹರಿ.

www.srihariknoday.com

# ಚಿಂತನೆ

ಆತ್ಮನ ಜೊತೆ ಹುಟ್ಟಿದ ಭಾವನೆಗಳು ಅಪರಂಜ
ಶರೀರ ಭಾವನೆಯಿಂದ ಹುಟ್ಟಿದ
ಭಾವನೆಗಳ ವ್ಯತ್ಯಾಸ ಗುಲಗಂಜಿ
ನಾನು ನನ್ನದೆಂಬ ಭಾವನೆಗಳಿಂದ ದೂರವಿರುವ
ಎಲ್ಲಾ ಭಾವನೆಗಳು ಅಪ್ಪಟ ಅಪರಂಜಿ !

- ಶ್ರೀ ಹರಿ.

www.shrihariksoday.com

# ಚಿಂತನೆ

ನಾಲಿಗೆ ಬರಿ ರುಚಿ ನೋಡುವ ಸಾಧನೆಯಾಗದೆ
ನಾಲಿಗೆ ರುಚಿಕರವಾದ ಪದಗಳುಳ್ಳ ಅಕ್ಷರಗಳ
ಉಚ್ಛಾರದಿಂದ
ವಾತಾವರಣವನ್ನೇ ಬದಲಿಸಿ ಪ್ರಗತಿಗೆ ಬೇಕಾದ
ಹೊಸ ವಾತಾವರಣವನ್ನು ಕ್ಷಣದಲ್ಲಿಯೇ ಕಟ್ಟಿ
ಎಲ್ಲರ ಮನಗಳನ್ನು ಬದಲಿಸುತ್ತದೆ!

– ಶ್ರೀ ಹರಿ.

www.shriharikhoday.com

# ಚಿಂತನೆ

ಕೆಲಸವಿಲ್ಲದವರು  ನಿಂದಿಸುವರು ನಿಂದನೆಯನ್ನು
ತಿಳಿಯದವರಿಗೆ
ಕೆಲಸ ಮುಗಿಸಲು ಕಾಲವು ಸಾಲದೆ ನಿಶಬ್ಧದಲ್ಲಿ ಕೆಲಸದಲ್ಲಿ
ನಿರತರಾಗಿರುವರು!
ಪ್ರಗತಿಯ ಹಾದಿ ತಿಳಿಯದ ನಿಂದನೆ  ಸತ್ಯದಿಂದ
ದೂರವಿರುವ ನಿಂದನೆ
ತಾನು  ಇಲ್ಲದ  ನಾಲಿಗೆ  ನುಡಿಯುವ  ನಿಂದನೆ
ತನ್ನ ತನ್ನ  ಒಡನಾಡಿಗಳ ಜೀವವನ್ನು  ಹಾಳುಗೆಡವುದು !

– ಶ್ರೀ ಹರಿ.

www.sriharikhoday.com

# ಚಿಂತನೆ

ಕೆಲಸ ಮಾಡಲು ಇಚ್ಛಿಸುವವರಿಗೆ
ಕೆಲಸ ಮಾಡಲು ಕೊನೆಗಳು ತಿಳಿಯದು
ಚಂಚಲ ಮನಸ್ಸಿಗೆ ಕೊನೆಗಳೇ ತಿಳಿಯದು
ಚಂಚಲ ಮನಸ್ಸಿಗೆ ಮೊದಲ ನೆನಪಿಲ್ಲದೆ
ಕೊನೆಗಾಣದ ಆಸೆಗಳಿಗೆ ಆಸೆ ಪಡುತ್ತ
ಕೊನೆಯೇ ಕಾಣದ ದುಃಖವನ್ನು ಅನುಭವಿಸುವುದು!

- ಶ್ರೀ ಹರಿ.

www.srikrishnaday.com

# ಚಿಂತನೆ

www.sriharikhoday.com

ಅನ್ನದ ಕಾಳಿಗೆ ಇರುವ ಬೆಲೆ ನಾಣ್ಯಕ್ಕಿಲ್ಲ
ಪ್ರೀತಿ ಮತ್ತು ಮಮತೆಯನ್ನು ಹಣದಿಂದ
ಕೊಳ್ಳಲಾಗುವುದಿಲ್ಲ
ಹಣ ಕೊಟ್ಟು ಪ್ರೀತಿ ಮತ್ತು ಪ್ರಖ್ಯಾತಿಗಳನ್ನು ಕೊಳ್ಳುವುದು
ಬೆಂಕಿಯನ್ನು ಕೊಳ್ಳುವಂತೆ, ಶ್ರಮದಿಂದ ಬೆಳೆಯುವ ಬೆಳೆ
ತ್ಯಾಗದಿಂದ ಬೆಳೆಯುವ ಪ್ರೀತಿ ಮತ್ತು ಪ್ರಾಮಾಣಿಕತೆ
ತಾನು ತನ್ನದು ಮರೆತಿರುವ ಸರಳ ಜೀವನದ ರೀತಿ
ಎಂದೂ ಕೊಳೆಯಲಾಗದ ಹಣವನ್ನು ಮೀರಿಸುವ ಆಸ್ತಿ

– ಶ್ರೀ ಹರಿ.

# ಚಿಂತನೆ

ಮನಸ್ಸಿದ್ದರೆ ಮಹದೇವ
ಕನಸಿದ್ದರೆ ಕಾಲ ಜೊತೆ ಬೆರೆಯುವಂತೆ
ಬಯಸುತ್ತಲೇ ಇದ್ದರೆ ಕಾರ್ಯ ರೂಪುಗೊಳ್ಳುವಂತೆ
ಆಯಸ್ಸು ಇರುವವರೆಗೆ ದುಡಿಯುವ ಮನೋಭಾವನೆ
ಇದ್ದರೆ
ಯಶಸ್ಸು ನೆರಳಾಗಿ ಹಿಂದೆ ಬಂದು ಕಾಯುತ್ತದೆ!

– ಶ್ರೀ ಹರಿ.

www.srikanthoday.com

# ಚಿಂತನೆ

ಜನಗಳಲ್ಲಿ ಸುಳ್ಳು ಕೇಳುವ ಬೇಡಿಕೆ ಇದ್ದಲ್ಲಿ
ನೀ ಮಾತಾಡದೆ ಮೂಕನಾಗಿ ಬಿಡು
ಅಂಜಿಕೆಯಿಲ್ಲದೆ ಪಾಪಗಳ ಮಾಡುತ್ತಿರುವ ದಿನಗಳಲ್ಲಿ
ನೀ ಕುರುಡನಂತೆ, ಕಂಡರೂ ಕಾಣಲಾಗದು ಎಂದು
ಬಿಡು!
ಚಾಡಿಗಳ ಸುರಿಮಳೆ ಬೀಳುತ್ತಿರುವ ದಿನಗಳಲ್ಲಿ
ನೀ ಕಿವುಡನಾಗಿ ಏನೂ ಕೇಳುತ್ತಿಲ್ಲವೆಂದು ಹೇಳು

– ಶ್ರೀ ಹರಿ.

www.srikanthoday.com

# ಚಿಂತನೆ

ಕಷ್ಟಗಳಿಲ್ಲದೆ ಸುಖದಿಂದ ಉಸಿರಾಡುವುದು ಪ್ರಕೃತಿಯ ಧರ್ಮವಾದರೆ
ನಾವುಗಳು ನಮ್ಮ ಕಷ್ಟಗಳಿಗೆ ಬೇರೆಯವರನ್ನು ನಿಂದಿಸದೆ ನಮ್ಮ ಸುಖದಲ್ಲಿ ಬೇರೆಯವರನ್ನು ಭಾಗಿಯಾಗಿಸುವುದು ನಮ್ಮ ಗುಣವಾದರೆ, ಎಂದೆಂದಿಗೂ ನಮ್ಮ ಸುಖಗಳ ಹಿಂದೆ ಕಷ್ಟಗಳನ್ನು ಬಚ್ಚಿಟ್ಟುಕೊಂಡು ನಮ್ಮ ಸುಖದ ಅನುಭವಗಳಿಗೆ ಕಷ್ಟಗಳೇ ಕೊಂಡಾಡಿ ಸಂತಸ ಉಕ್ಕಿ ಹರಿಯುತ್ತದೆ

– ಶ್ರೀ ಹರಿ.

www.srikaritoday.com

# ಚಿಂತನೆ

ಹೆಜ್ಜೆ ಹೆಜ್ಜೆಗೆ ಹಿಂದೆ ನೋಡದೆ
ಮುಂದಿನ ಪ್ರಗತಿಯ ದೆಸೆ ಹುಡುಕುತ್ತ
ಬೇಸರ ಮೈಭಾರವನ್ನು ಇಳಿಸಿಕೊಂಡು
ಎಳೆದುಕೊಂಡು ಹೋಗುತ್ತಿರುವ ಕಾಲದ ನೇಗಿಲಿಗೆ
ಏಳಿಗೆ ವರಮಾನದ ದೆಸೆ ತೋರಿಸೋಣ!

- ಶ್ರೀ ಹರಿ.

www.sriharikhoday.com

# ಚಿಂತನೆ

ಈ ದಿನದ ಸೂರ್ಯ ನೀಡಿರುವ ಕಾಲದ ಅವಧಿಯಲ್ಲಿ
ತಾನು ಬೇರೆಯವರ ಜೊತೆಗೆ ಏನು ಸಾಧನೆ
ಮಾಡಬೇಕು
ಈ ದಿನದ ತನ್ನ ಜವಾಬ್ದಾರಿಯೇನು ಎಂದು ಮನೋ
ಅನಿಸಿಕೆಗಳು
ಜೀವನದಲ್ಲಿ ಅನೇಕ ಸಾಧನೆ ಮಾಡಿ ಸಮಾಜದ
ಗೌರವ ಪಡೆದು
ತನ್ನ ಸಿರಿತನದ ತೃಪ್ತಿ ಪಡೆಯುವನು!

– ಶ್ರೀ ಹರಿ.

www.sriharikhoday.com

# ಚಿಂತನೆ

ಯಾವ ಬೇಡಿಕೆಗಳು ಇಲ್ಲದ ಸೂರ್ಯ ಬೆಳಕು
ನೀಡುವಂತೆ
ಭೇದವಿಲ್ಲದ ಭೂಮಿ ಸಮಬೆಳೆಯನ್ನು ಕೊಡುವಂತೆ
ಸಕ್ಕರೆಯಿಲ್ಲದ ಭೂಮಿ ಸಿಹಿಯಾದ ಹಣ್ಣುಗಳನ್ನು
ಬೆಳೆಸುವಂತೆ
ಯಾವ ಕೆಲಸ ಮಾಡಿದರೂ ಯಾರಿಗೂ ನೋವಾಗದಂತೆ
ಜಗದಲ್ಲಿರುವ ಐಶ್ವರ್ಯವೆಲ್ಲಾ ತಮ್ಮದೆಂದು ತಿಳಿಸುತ್ತ
ಯಾವುದಕ್ಕೂ ನಾವು ಕಮ್ಮಿ ಇಲ್ಲವೆಂದು
ತಲೆಯತ್ತಿ ಸಂತಸದಿ ಮೆರೆಯೋಣ!          - ಶ್ರೀ ಹರಿ.

www.srikrishnodaya.com

# ಚಿಂತನೆ

ಉರಿಯುತ್ತಿರುವ  ದೀಪ ಬೆಳಕು ಹರಿಸಿದರೆ
ಉರಿದು ಉರಿದು ತಾನು ಬೆಳಕು  ನೀಡುತ್ತಿರುವೆನೆಂದು
ಹೇಳದೆ
ಉರಿಯುತ್ತಿರುವ  ದೀಪವ ನೋಡಿ,
ನಾವುಗಳು ಇದು ಮಾಡಿದ್ದೀವಿ ಅದು ಮಾಡಿದ್ದೇವೆ
ಎಂಬ ಅಹಂಕಾರ, ನಮ್ಮ ಜೀವನದ ಮೌಲ್ಯದ
ಬೆಳಕನ್ನು ಪ್ರಕಾಶಿಸುದಿಲ್ಲ!

– ಶ್ರೀ ಹರಿ.

www.shriharikhoday.com

# ಚಿಂತನೆ

ಹಸಿವಿಗಾಗಿ ಕವಳ, ಚಳಿಗಾಗಿ ಬಟ್ಟೆ, ಜೀವನಕ್ಕಾಗಿ ದುಡಿಮೆ,
ಮಿಕ್ಕಿದ್ದೆಲ್ಲಾ ಬೇಡದ ಪದಾರ್ಥಗಳು
ಮಾಡುವುದನ್ನು ಮರೆಯದೆ ಮಾಡಿ , ಜನಗಳು
ಬೇಡದನ್ನು ಯೋಚಿಸಿ ಯೋಚಿಸಿ ,ತಮ್ಮ ಗಮನವನ್ನು
ದೇವರಿಂದ ದೂರ ಹರಸಿ
ಏನೂ ಸಿಗದ ಮರುಭೂಮಿಯಲ್ಲಿ ಇದು ಬೇಕು ಅದು
ಬೇಕು ಎಂಬ ಮನಸ್ಸಿನ ಆಟಕ್ಕೆ ಮನುಜ
ಬಲಿಯಾಗಿರುವನು !

- ಶ್ರೀ ಹರಿ.

www.shriharikhoday.com

# ಚಿಂತನೆ

ಪ್ರಕೃತಿಯ ಬೆಳೆಗೆ ಸೂರ್ಯನ ಸಾಧನೆ
ಆಕಾಶದ ಮೋಡಗಳಿಗೆ ನೀರು ತರಿಸುವ ಸಾಧನೆ
ಸಮುದ್ರವು ಕೊಳೆ ನೀರು ನದಿಗಳಿಗೆ ಶುಭ್ರತೆಗಳ
ಮೋಡಗಳಾಗಿ ತಿಳಿ ನೀರ ಹರಿಸುವ ಸಾಧನೆ !
ಕಷ್ಟದಲ್ಲಿ ಇರುವವನಿಗೆ ಸುಖ ನೀಡುವುದು ಸಾಧನೆ
ದುಃಖದಲ್ಲಿರುವವನಿಗೆ ಸಂತಸ ನೀಡುವುದೇ ಒಂದು
ಸಾಧನೆ

– ಶ್ರೀ ಹರಿ.

www.srihariudaya.com

# ಚಿಂತನೆ

ಪ್ರಕೃತಿಯ ಬೆಳೆಗೆ ಸೂರ್ಯನ ಸಾಧನೆ
ಆಕಾಶದ ಮೋಡಗಳಿಗೆ ನೀರು ತರಿಸುವ ಸಾಧನೆ
ಸಮುದ್ರವು ಕೊಳೆ ನೀರು ನದಿಗಳಿಗೆ ಶುಭ್ರತೆಗಳ
ಮೋಡಗಳಾಗಿ ತಿಳಿ ನೀರ ಹರಿಸುವ ಸಾಧನೆ!
ಕಷ್ಟದಲ್ಲಿ ಇರುವವನಿಗೆ ಸುಖ ನೀಡುವುದು ಸಾಧನೆ
ದುಃಖದಲ್ಲಿರುವವನಿಗೆ ಸಂತಸ ನೀಡುವುದೇ ಒಂದು
ಸಾಧನೆ

- ಶ್ರೀ ಹರಿ.

www.srihariknoday.com

# ಚಿಂತನೆ

ಎಣ್ಣೆ ದೀಪ  ಉರಿಸಬಲ್ಲದು ಎಂದು
ಹುಟ್ಟನಿಂದ  ತಿಳಿದಿಲ್ಲ
ನೀರು   ಬೆಳೆಯನ್ನು  ಬೆಳೆಸುವುದು
ನೀರಿಗೆ ಹುಟ್ಟನಿಂದ ತಿಳಿದಿಲ್ಲ
ಹುಟ್ಟನಿಂದಲೇ   ಆ ಶಕ್ತಿ ನಮ್ಮಲ್ಲಿ ಇದ್ದರೂ
ಅನೇಕ   ಕಾರಣಗಳಿಂದ ನಮಗೆ ತಿಳಿದಿಲ್ಲ!

– ಶ್ರೀ ಹರಿ.

www.shriharikhodaay.com

# ಚಿಂತನೆ

ಕೊಟ್ಟಿದಷ್ಟೇ ಮಾತ್ರ ಮರಳಿ ಬರುವುದು
ನೀಡಿದಷ್ಟೆ ಮಾತ್ರ ನಮಗೆ ದಕ್ಕುವುದು
ದುಡಿದಷ್ಟು ಬೆಳೆ ಬೆಳೆಯುವುದು !
ಕಷ್ಟದಲ್ಲಿ ಭಾಗಿಯಾಗಿ ಕಷ್ಟದಲ್ಲಿ ನಾವು ಜೊತೆಯಾದರೆ
ದೇವರು ನಾವು ಬಯಸಿರುವುದ ಮೇಲೆ ಹೆಚ್ಚಿನದನ್ನು
ನೀಡುವನು !

– ಶ್ರೀ ಹರಿ.

www.shriharitoday.com

# ಚಿಂತನೆ

ಹುಟ್ಟಿದ ಮೇಲೆ ಹೆಸರು ಪಡೆಯಬೇಕು
ಹುಟ್ಟಿದ ಮೇಲೆ ಒಳ್ಳೆಯ ಕೆಲಸಗಳನ್ನು ಹುಡುಕುತ್ತಲೇ ಇರಬೇಕು
ಹುಟ್ಟಿದ ಮೇಲೆ ನಾನು ನನ್ನದೆಂಬ ಅಹಂಕಾರ ಮರೆಯಬೇಕು
ಹುಟ್ಟಿದ ಮೇಲೆ ಎಲ್ಲರಿಗೂ ಶಾಂತಿ ನೀಡಬೇಕು
ಹುಟ್ಟಿದ ಮೇಲೆ ಬೇರೆಯವರ ಸಂತೋಷ ನೋಡಬೇಕು
ಹುಟ್ಟಿದ ಮೇಲೆ ನಮ್ಮನ್ನು ಪ್ರೀತಿಸುವವರನ್ನು ಗಳಿಸಿಕೊಳ್ಳಬೇಕು
ಹುಟ್ಟಿದ ಮೇಲೆ ಅರ್ಥವಿಲ್ಲದ ದ್ವೇಶ ದೂರವಿಡಬೇಕು
ಹೆಜ್ಜೆ ಹೆಜ್ಜೆಗೂ ಸಾಧನೆಗೆ ಹೊಸ ಹೆಜ್ಜೆ ಇಡುತ್ತಲೇ ಇರಬೇಕು!

– ಶ್ರೀ ಹರಿ.

www.sriharikhoday.com

# ಚಿಂತನೆ

ಯಶ ತರುವ ಜೀವನ ದಾರಿಯಲ್ಲಿ ಮುನ್ನಡೆಯಿರಿ
ಗಮನ ಹರಿಸದೆ ತಪ್ಪನ್ನು ಮಾಡಬೇಡಿ
ತಪ್ಪನ್ನು ಮಾಡಿದಾಗ . .ತಪ್ಪನ್ನು ಗಮನಿಸಿದರೆ
ಜೀವನದಲ್ಲಿ ತಪ್ಪುಗಳು ಎಂದೂ ಅಡ್ಡಬರದೆ
ಅಹಂಕಾರಗಳ ಮರೆತು ರಸಭರಿತ ಜೀವನದಲ್ಲಿ
ರಚನಾತ್ಮಕ ಕೆಲಸಗಳನ್ನು ಮುನ್ನಡೆಸುತ್ತ, ಜೀವನ,
ನಮ್ಮ ಜೀವನವೆಂದು ತೃಪ್ತಿಯಿಂದ ಜೀವಿಸುತ್ತದೆ !

– ಶ್ರೀ ಹರಿ.

www.shrikhoday.com

# ಚಿಂತನೆ

ಬಾಳುವವನೇ ಭಾಗ್ಯವಂತ
ಶಪಿಸಲು ತಿಳಿಯದವನೇ ಅದೃಷ್ಟವಂತ
ಪಾಪ ಪುಣ್ಯಗಳನ್ನು ಮರೆತು ಬಾಳುವವನೇ
ಹೂವಿನಂತೆ ಪ್ರಕೃತಿಯ ಆರಾಧಕ
ಬಾಳ ಬೆಳಕಲ್ಲಿ ಎಲ್ಲರ ಜೊತೆ ಬೆರೆತು
ಪ್ರಕೃತಿಯಂತೆ ಬಾಳ ಬೆಳಕಿನಲ್ಲಿ ಜೀವಿಸುವವನು
ಪ್ರಕೃತಿಯ ಪ್ರಯೋಜಕ

– ಶ್ರೀ ಹರಿ.

www.srikanthoday.com

# ಚಿಂತನೆ

ಸತ್ಯವನ್ನು ಮಾತಿನ ಜೊತೆಗೆ ಸಲಿ ಸಲಿ ಬೆಳೆಸದೆ
ಸತ್ಯವನ್ನು ಮನಸಾರೆ ತಿಳಿಯಬೇಕು
ಸತ್ಯವನ್ನು ಪೂರ್ಣ ರೀತಿಯಿಂದ ಬಳಸಿಕೊಂಡರೆ
ಸತ್ಯ ಜೀವನವೆಲ್ಲ ಜೊತೆಗಿರುತ್ತದೆ
ಸತ್ಯವನ್ನು ಕ್ಷಣಿಕವಾಗಿ ಬಳಸಿಕೊಂಡರೆ
ಸುಳ್ಳಿನ ರೂಪ ಪಡೆದು ಮುಂಬರುವ ಕಾಲದಲ್ಲಿ
ಕಷ್ಟಗಳು ಕೇಳದೆ ಸಾಲು ಸಾಲಾಗಿ ಎದುರಾಗುವುವು !

– ಶ್ರೀ ಹರಿ.

www.shriharikhoday.com

# ಚಿಂತನೆ

ಗೆಲುವನ್ನು ಸಾಧಿಸಬಲ್ಲದು ಸಾಮರ್ಥ್ಯ
ಕೆಟ್ಟ ಮನಸ್ಸನ್ನು ಗೆಲ್ಲಲು ಒಳ್ಳೆ ಮನಸ್ಸಿನ ಉದ್ಭವ ಸಾಮರ್ಥ್ಯ
ಎದುರಿಗೆ ಕಾಣದೆ ದಶಧಿದಿಕ್ಕುಗಳನ್ನು ನೋಡುವುದು ಸಾಮರ್ಥ್ಯ
ಮುಳುಗಿದ ಹಡಗಿನಿಂದ ಹೊರ ಈಜಿ ದಡ ಸೇರಲು ಸಾಮರ್ಥ್ಯ
ಭವಿಷ್ಯವನ್ನು ಯೋಚಿಸುವುದು ಸಾಮರ್ಥ್ಯ
ಮಾನವನಿಗೆ ಕಷ್ಟಗಳನ್ನು ಎದುರಿಸಲು ಬೇಕು ಧೈರ್ಯದ ಸಾಮರ್ಥ್ಯ

- ಶ್ರೀ ಹರಿ.

# ಚಿಂತನೆ

ಈ ದೇಶ ನಮ್ಮದು , ಈ ಪ್ರಪಂಚ ನಮ್ಮದು, ಈ ಗಾಳಿಯು ನಮ್ಮದು, ಎಲ್ಲರ ಸುಖ ನಮ್ಮದು, ಎಲ್ಲರ ಕಷ್ಟ-ನಷ್ಟಗಳು ನಮ್ಮದು

ಸಮಾಜದ ಬೇಡಿಕೆಯನ್ನು ಹುಡುಕುವವರು ನಾಯಕರು

ಬೆರೆತು ಜೀವಿಸುವವನೇ ನಾಯಕ

ಕಷ್ಟ-ನಷ್ಟಗಳು ಬರೀ ಕಿವಿಯಿಂದ ಕೇಳಿದರೆ ಅರ್ಥ ಬರದು

ಜನಗಳ ಕಷ್ಟ-ಸುಖಗಳಲ್ಲಿ ಬೆರೆತು,

ಬೆರೆತಾಗ ಬರುವ ಮನೋಭಾವನೆಗಳು ನಾಯಕನ ಭಾವನೆಗಳು !

- ಶ್ರೀ ಹರಿ.

www.Srikarikhoday.com

# ಚಿಂತನೆ

ದಡಧಡನೆ ಎಡವದೆ ಓಡುತ್ತಿರುವ ಕೆಲಸ ಸಾಧಿಸಿ
ಅಲ್ಲಾಡದೇ ಒಂದೆಡೆ ಕುಳಿತು ಎಡವಿ ಕೆಳಗೆ ಬೀಳುವೆ
ಎಂಬ ಭಯ ಕುಳಿತಲ್ಲೇ ಕುಳಿತು ಕರಗಿ ಹೋಗುತ್ತಿರುವರು!
ಮಾತು ಮಾತಿನ ನಿಪುಣತೆ ಕಷ್ಟಜೀವಿಯಾಗಿ
ಜಾಣತನದಿಂದ ಕೆಲಸ ಮುಗಿಸುವವನೇ ಕಷ್ಟಜೀವಿ
ಮಾತನಾಡಿದರೆ ತಪ್ಪು ಅವನ ಜೊತೆ ಮಾತು ಬಿಟ್ಟಿದ್ದೇನೆ
ಅವನ ಜೊತೆಗೂ ನನಗೂ ಸಂಬಂಧವಿಲ್ಲವೆಂದು
ಹೇಳುವವರು
ಜಗಲಿ ಸೋಂಬೇರಿಗಳು

– ಶ್ರೀ ಹರಿ.

www.srihariindia.com

# ಚಿಂತನೆ

ಉತ್ತಮ ನಿರ್ಧಾರವನ್ನು ಮಾಡಲು ಸತ್ಯ ಜೊತೆಗೆ ಬೇಕೇ . .ಬೇಕು

ಸತ್ಯದಿಂದ ನಮ್ಮನ್ನು ನಾವೇ ಅಳೆದುಕೊಂಡು

ನಮ್ಮ ಅಂತರಾಳದ ಶಕ್ತಿಯನ್ನು ಹೆಚ್ಚಿಸಿಕೊಂಡು

ಕೈ ಹಿಡಿದಿರುವ ಕಾರ್ಯಕ್ರಮಗಳಿಗೆ ಪೂರ್ಣ ರೂಪವನ್ನು ಕೊಡಬಹುದು

ದೇವರ ಜೊತೆಗೆ ಪ್ರಕೃತಿ . . ಪ್ರಕೃತಿಯ ಜೊತೆಗೆ ಅನುಭವ

ಅದರ ಜೊತೆ ಸತ್ಯವು ಬೆರೆತುಕೊಂಡರೆ ನಮಗೆ ಜಯ ಕಚಿತ

ನಾವು ಸತ್ಯದ ತಿಳಿ ಅರ್ಥವನ್ನು ನಮ್ಮ ಜೀವನಧಿದಲ್ಲಿ ಬಳಸಿದರೆ

ಎಂದೆಂದಿಗೂ ಜಯ . .ಎಂದೆಂದಿಗೂ ಲಾಭ . . .ಎಂದೆಂದಿಗೂ ಸುಖ

– ಶ್ರೀ ಹರಿ.

www.srikanthoday.com

# ಚಿಂತನೆ

ಮಾನವ ತನ್ನ ಹಿರಿಮೆಯನ್ನು ಪ್ರಯತ್ನವಿಲ್ಲದೆ ಸಾಧಿಸಲು ಯತ್ನಿಸುತ್ತಿರುವನು

ನೀರು ಎಂದೂ ನೀರಾಗಿ ಉಳಿಯುವಂತೆ, ಗಾಳಿ ಎಂದಿಗೂ ಗಾಳಿಯಾಗಿರುವಂತೆ

ಬೆಳಕು ಬೆಳಕಾಗಿ ಎಲ್ಲೆಲ್ಲೂ ಪ್ರಕಾಶಿಸುವಂತೆ, ನಮ್ಮ ಭಾವನೆಗಳೆಲ್ಲ

ಪ್ರಕೃತಿಯ ಅಂಶಗಳಾಗಿ, ಶುದ್ಧ ಸ್ಥಾನದಲ್ಲಿ ಭಾವನೆಗಳು ವಿಹರಿಸಲಿ

ಯೋಗ್ಯ ಜನಗಳ ಜೊತೆ ಯೋಗ್ಯ ರೀತಿಯ ಭಾವನೆ

www.srikarikhoday.com

# ಚಿಂತನೆ

ಯೋಗ್ಯ ಸಮಸ್ಯೆಗಳ ಜೊತೆಗೆ ಯೋಗ್ಯ ಉತ್ತರ
ರೀತಿಯ ಸಾಧನೆ
ಯೋಗ್ಯ ರೀತಿಯಲ್ಲಿ ಸ್ವೀಕರಿಸಿ ಯೋಗ್ಯ ರೀತಿಯಲ್ಲಿ
ವಿಸ್ತರಿಸಿ
ಯೋಗ್ಯ ಸಾಧನೆಗಳನ್ನು ಸಂಪಾದಿಸೋಣ !

- ಶ್ರೀ ಹರಿ.

www.sriharikhoday.com

# ಚಿಂತನೆ

ಆಕಾಶದಲ್ಲಿರುವ ದೇವರೇ,   ಬೇಡಲು ತಿಳಿಯದ
ಮುಗ್ದ  ಮನದ  ಅನಿಸಿಕೆಗಳನ್ನು  ಈಡೇರಿಸು !
ಎಲ್ಲವೂ  ನಿನಗೆ ತಿಳಿದಿದೆ ಎನ್ನುವರ ಮಾತು ಸುಳ್ಳಾಗದೆ
ಹಸಿದ ಹೊಟ್ಟೆಗೆ ಕೂಳು ನೀ ಕೊಡಲು ಗೋಳಾಡಿಸದೆ
ಏಕೆ  ಹಸಿವಾಗುತ್ತಿದೆ ಎಂದು ತಿಳಿಯದ  ಮುಗ್ದ
ಮನಸ್ಸುಗಳಿಗೆ
ಅವರ  ಬಯಕೆಗಳನ್ನು  ಈಡೇರಿಸು !

– ಶ್ರೀ ಹರಿ.

www.srikanrikhoday.com

# ಚಿಂತನೆ

ಅಹಂಕಾರವಿಲ್ಲದೆ ನೆಮ್ಮದಿಯ ಅಸೂಯೆಗಳಿಲ್ಲದ
ನಿರಾಳ ಭಾವನೆಯ ದೇವರಿಂದಾದ ನಾವು
ಬೇರೆಯವರ ಸುಖದಲ್ಲಿ ನಮ್ಮ ಆನಂದ, ಸುಖ ಪಡೆಯುತ್ತ
ಎಣ್ಣೆಯಿರುವವರಿಗೂ ಬೆಳಕು ಎಂಬ ಅರಿವು ದೀಪಕ್ಕಿರುವಾಗ
ದೇವರ ಕೃಪೆಯಿರುವವರೆಗೂ ಕಷ್ಟ ಪಡುತ್ತ ,
ಜೀವ ಇರುವವರೆಗೂ ಜೀವನ ಎಂದು ತಿಳಿದು
ತನಗೆ ಬರುವ ಕೆಲಸಗಳನ್ನು ದೇವರ ಕೆಲಸಗಳೆನ್ನುತ ಕಾಲದ ಜೊತೆ
ನಿರಾಳ ತ್ಯಾಗ ಸತ್ಯದ ಭಾವನೆಗಳ ಜೊತೆಗೆ ಜೀವನ ಸಾಗಿಸೋಣ

– ಶ್ರೀ ಹರಿ.

www.srimanikhodaya.com

# ಚಿಂತನೆ

ನಮ್ಮಲ್ಲಿ ಪ್ರೀತಿ ಇಲ್ಲದಿರೆ ಜಗತ್ತಿನಲ್ಲಿ ಹುಡುಕಿದರೂ ಪ್ರೀತಿ ಸಿಗದು
ನಮ್ಮಲ್ಲಿ ಜೊತೆ ಜೀವನ ಇಲ್ಲದಿರೆ
ಜಗತ್ತಿನಲ್ಲಿ ಯಾವ ಜೀವ ಜೊತೆ ಸೇರದು
ನಮ್ಮಲ್ಲಿ ಒಳ್ಳೆಯ ಮನಸ್ಸು ಇಲ್ಲದಿರೆ
ಒಳ್ಳೆಯ ಮನಸ್ಸುಗಳ ಜನಗಳು ಸಿಗರು
ನಮ್ಮ ಕಣ್ನೋಟದಲ್ಲಿ ಸೌಂದರ್ಯವಿಲ್ಲದಿರೆ
ಜಗತ್ತು ಎಂದೂ ಸುಂದರವಾಗಿ ಕಾಣದು
ನಮ್ಮ ಸಂಸಾರದಲ್ಲಿ ಸಂತಸ ಇಲ್ಲದಿರೆ
ಜಗತ್ತಿನಲ್ಲಿ ಹುಡುಕಿದರೂ ಸಂತಸ ಸಿಗದು! – ಶ್ರೀ ಹರಿ.

www.srihariKhoday.com

# ಚಿಂತನೆ

ಈ ದಿನ ನಾವೊಂದು ಸಾಹಸವನ್ನು ಮಾಡೋಣ
ಸೂರ್ಯ -ಚಂದ್ರರು ಸುಮ್ಮನೇ ಇರದಿರುವಾಗ
ನಾವೇಕೆ ಸುಮ್ಮನಿರಬೇಕು,
ಅಜ್ಞಾನ ಏನೆಂದು ತಿಳಿದ ನಾವುಗಳು
ಜ್ಞಾನವನ್ನು ನಮ್ಮೊಳಗೆ ಹೇಗೆ ಹುಡುಕುವುದು
ನಮ್ಮಲ್ಲೇ ಅಗೋಚರ ಶಕ್ತಿ ಇದೆ ಎಂದರೆ
ಹಂತ ಹಂತದಲ್ಲಿ ಅಜ್ಞಾನ ಕರಗಿ ಹೋಗುತ್ತದೆ
ನಮ್ಮಲ್ಲಿರುವ ಆತ್ಮನ ಜೊತೆ ಬೆರೆತು
ಸತ್ಯವನ್ನು ಹುಡುಕುವ ಸಾಹಸ ಮಾಡೋಣ

– ಶ್ರೀ ಹರಿ.

www.shriharikhoday.com

# ಚಿಂತನೆ

ಬುದ್ಧಿ ಜೀವಿಗಳು ಬುದ್ಧಿವಂತರೆಂದು  ಹೇಳುತ್ತಲೇ ಇರಲಿ
ನಾವು ಬುದ್ಧಿ ಬೇಡದ ಸತ್ಯದ ಜೊತೆಗೆ ಬೆರೆಯೋಣ
ಹಳ್ಳ ಇರುವಲ್ಲಿ ನೀರು ತುಂಬಿ ಕೊಳ್ಳುವಂತೆ
ತಗ್ಗು ಪ್ರದೇಶದಲ್ಲಿ ನೀರು  ಹರಿಯುವಂತೆ
ಇಳಿಜಾರಲ್ಲಿ ನೀರಿಲ್ಲದೆ ಜಾರುವಂತೆ
ದೇವರ ಶಕ್ತಿಗೆ ಬುದ್ಧಿಯಿಲ್ಲದೆ  ತಲೆ ತಗ್ಗಿಸಿದರೆ
ದೈವತ್ವ ತಾನೇ ನಮ್ಮ ಮನದ ಆಳದಲ್ಲಿ
ತುಂಬಿಕೊಳ್ಳುತ್ತದೆ !

– ಶ್ರೀ ಹರಿ.

www.sriharikhoday.com

# ಚಿಂತನೆ

ಅಳಬೇಡ  ನಗು, ದ್ವೇಶಿಸಬೇಡ ಮೈತ್ರಿಯ ಬೆಳೆಸು
ದು:ಖಿಸಬೇಡ ಸಂತಸ ಪಡು
ಅಹಂಕಾರ ಬೇಡ ಎಲ್ಲರೆದುರು ತಲೆತಗ್ಗಿಸಿ ನಡೆ
ಕಾರಣವಿಲ್ಲದೆ ದ್ವೇಶಿಸುವವರ ಜೊತೆಗೆ ಮಾತನಾಡು,
ಮಾತು ಮಾತುಗಳಲ್ಲೇ ದ್ವೇಶದ ಕಾರಣವೇನೆಂದು
ಒಬ್ಬರನ್ನೊಬ್ಬರು ಅರಿತರೆ, ದ್ವೇಶದಿಂದ ಕಳೆದುಹೋದ
ಕಾಲ ಮರೆತು ತೆರೆದ ತೋಳಿನಿಂದ ಅಪ್ಪಿಕೊಳ್ಳುವುದೇ
ಬಾಳು !

- ಶ್ರೀ ಹರಿ.

www.srikrishnaday.com

# ಚಿಂತನೆ

ಬೇರೆಯವರಲ್ಲಿ ಬರೀ ತಪ್ಪು ಹುಡುಕುತ್ತಲೇ ಇದ್ದರೆ
ಕೆಟ್ಟ ಪರಿಣಾಮ ನಮ್ಮ ಮೇಲೆ ಬೀರುತ್ತದೆ
ಬೇರೆಯವರಲ್ಲಿ ಬರೀ ಒಳ್ಳೆಯದನ್ನೇ ಹುಡುಕುತ್ತಿದ್ದರೆ
ಒಳ್ಳೆ ಪರಿಣಾಮ ನಮಗೆ ಒಳ್ಳೆಯದನ್ನೇ ಮಾಡುತ್ತದೆ!
ಬೇರೆಯವರಲ್ಲಿ ಅಡಗಿರುವ ಸಾಧನಾ ಶಕ್ತಿಯನ್ನು
ಗುರುತಿಸಿದರೆ
ಜೊತೆ ನಮ್ಮಲ್ಲಿರುವ ಮನದ ಸೌಂದರ್ಯ ನಮ್ಮ ಮನಕ್ಕೆ
ಅಲಂಕಾರವಾಗಿ ನಮ್ಮನ್ನು ನೋಡುವವರ ಕಣ್ಣಿಗೆ
ನಮ್ಮ ಕ್ರಿಯಾಶೀಲತೆ - ಸಾಮರ್ಥ್ಯಗಳು ನಮ್ಮಲ್ಲಿ ಕಾಣುವುದು!

- ಶ್ರೀ ಹರಿ.

www.srikrishnodaya.com

# ಚಿಂತನೆ

ಮನೋಭಾವನೆಗಳು ನಿರಾಳ ಆಕಾಶದಂತೆ ಇದ್ದರೆ
ಹೊಸ ಕೆಲಸಗಳು ನಕ್ಷತ್ರದಂತೆ ಮಿನುಗಿ
ಬ್ರಹ್ಮಾಂಡದಲ್ಲಿರುವ ಎಲ್ಲಾ ವಿಷಯಗಳು
ಶ್ರಮವಿಲ್ಲದೆ ನಮಗೆ ಗೋಚರಿಸುವುದು
ನಮ್ಮ ಮನೋ ನೆನಪುಗಳ ಹಿನ್ನೆಲೆ ಇಲ್ಲದ
ವಾತಾವರಣದಲ್ಲಿ ಕಾರ್ಯಗಳ ಜೊತೆ ಬೆರೆತರೆ
ನಮ್ಮ ಜೀವನದ ನಡಿಗೆಯಲ್ಲಿ ಹೆಜ್ಜೆ ಹೆಜ್ಜೆಗೂ
ಹೊಸ ಹೊಸ ಚಿಗುರುಗಳ ಅನುಭವ ಕೊಡುವುದು

– ಶ್ರೀ ಹರಿ.

www.sriharikhaday.com

# ಚಿಂತನೆ

ಸುಳ್ಳನ್ನು ನಂಬಿ ಸುಳ್ಳಿನ ಸುಳಿಯಲ್ಲಿ ಸಿಲುಕಿ ನರಳುತ್ತಿರುವವರು
ಸುಳ್ಳನ್ನು ಒಪ್ಪಿಕೊಳ್ಳಲು ಹೆದರಿ ತಮ್ಮನ್ನು ತಾವೇ ಮರೆತಿರುವ
ಪರಿಸರದ ಗುಲಾಮಗಿರಿಯನ್ನು ಅನುಭವಿಸುತ್ತಿರುವವರು
ಸುಳ್ಳು ನಂಬಿರುವ ಮನುಜರು, ಏಕೆ ಸುಳ್ಳು ಹೇಳಬೇಕೆಂದು
ಅರಿಯದೆ
ಸುಳ್ಳು ನಂಬಿ ಈ ಜಗವು ನಡೆಯುವುದಿಲ್ಲ ಎಂದು ತಿಳಿದರೂ
ಕೂಡ
ಬೇರೆಯವರ ಅರ್ಥವಿಲ್ಲದ ಮಾತುಗಳನ್ನು ನಂಬಿ ,
ತಮ್ಮ ಮನವನ್ನು

www.srihariKhoday.com

# ಚಿಂತನೆ

ತಾವೇ ನಂಬದೆ, ಸುಳ್ಳಿನ ಆಧಾರದ ಮೇಲೆ
ಮುನ್ನಡೆಯುತ್ತಿರುವುದ
ಕಂಡರೆ  ಕಾಣದ ಹಳ್ಳಗಳಲ್ಲಿ  ಬೀಳುವುದು ಸತ್ಯ !

- ಶ್ರೀ ಹರಿ.

www.srikarikhoday.com

# ಚಿಂತನೆ

ಜನಗಳೇ  ಚಿಂತನೆಗಳನ್ನು ತೊಲಗಿಸಿ. .
ಬುದ್ಧಿಯನ್ನು ಮಂಕು ಮಾಡುತ್ತಿರುವ ಚಿಂತೆ
ಜ್ಞಾನದ ದೀಪವನ್ನು ಆರಿಸುತ್ತಿರುವ ಚಿಂತೆ
ಚಿಂತೆಗಳನ್ನು ದೂರ ಮಾಡಿ,
ಎಲ್ಲರ ಮುಖದ ಮೇಲೆ ನಗೆ ವಿಶ್ವಾಸ ಧೈರ್ಯವನ್ನು ತರಿಸಿ
ಅರ್ಥವುಳ್ಳ  ಪ್ರಗತಿ ತರಿಸುವ ಚಿಂತನೆ ಮಾಡಿ
ಜನಗಳಲ್ಲಿ ಸುಖದ  ಮೋಡಗಳ ಜೊತೆ ಆಡುತ
ಸಮೃದ್ಧಿಯ ಮಳೆ ಆಕಾಶದಿಂದ ತರಿಸೋಣ !

– ಶ್ರೀ ಹರಿ.

www.srikhariknoday.com

# ಚಿಂತನೆ

ಕಣ್ಣಿಲ್ಲದವನಿಗೆ ಕತ್ತಲು ಸಹಜ
ಕಣ್ಣಿಲ್ಲದವನಿಗೆ ಹೊಸ ಪ್ರಪಂಚ ಹೇಗೆ ತಿಳಿಯುವುದಿಲ್ಲವೋ
ಹಾಗೆ
ನಾವು ನಮ್ಮ ಸಹಜ ಸ್ಥಿತಿಯಿಂದ ಹೊರಗೆ ನೋಡದಿದ್ದಲ್ಲಿ
ಹೊರಗಿನ ಅವಶ್ಯಕತೆ ಕಾಣದೆ ಜಗತ್ತಿಗೆ ಉಪಯುಕ್ತನಾಗದೆ
ಜೀವನ ಕಳೆಯುತ್ತಿರುವವರು ಕೋಟಿ . . ಕೋಟಿ
ಒಳಗೆ ಹೊರಗೆ ನೋಡಿ ಹೊರಗಿನ ಕಷ್ಟಗಳಿಗೆ
ನಾವು ಭಾಗಿಯಾಗಿದ್ದಲ್ಲಿ ನಮ್ಮ ಜೀವನ ಸಾರ್ಥಕ

– ಶ್ರೀ ಹರಿ.

www.sriharikhoday.com

# ಚಿಂತನೆ

ಉಸಿರು ನಿಟ್ಟುಸಿರು ನಮ್ಮ ಕರ್ತವ್ಯ
ಹಸಿವು ಬಾಯಾರಿಕೆ ನಮ್ಮ ಶರೀರ ಧರ್ಮ
ಈ ಶರೀರವನ್ನು ಕಾಪಾಡುವುದು ನಮ್ಮ ಕರ್ತವ್ಯ
ಈ ಶರೀರವು ಬರೀ ಶರೀರವಲ್ಲ, ವಿಶ್ವದ ಅಸಾಧಾರಣ
ಉಪಕರಣ, ಸಹಾಯ ಮಾಡಲು ದೇವರು ಸೃಷ್ಟಿಸಿ
ವಿವೇಚನೆಗಳಿಂದ ಕಷ್ಟಗಳಲ್ಲಿ ಬೆರೆಯುವ ಶಕ್ತಿ
ಈ ಉಪಕರಣದ ವಿಶೇಷ ಶಕ್ತಿ!

– ಶ್ರೀ ಹರಿ.

www.sriharikhoday.com

# ಚಿಂತನೆ

ವಿವೇಕ ವಿವೇಚನೆ ಜೊತೆಗೆ ಸೃಷ್ಟಿ ಆಗಿರುವ ನೆನಪುಗಳು
ವಿವೇಕದಿಂದ ಕಾರ್ಯ ನಡೆಸುವ ಜೊತೆ ಜೊತೆಯಿರುವ
ಮನಸ್ಸು, ಈ ಜಗತ್ತಿನಲ್ಲಿ ಅಸಾಧ್ಯವೆಂಬುದಿಲ್ಲ, ಎಲ್ಲವೂ
ಆಗುವುದು
ಎಂಬ ಬೀಜಮಂತ್ರವನ್ನು ಉಪಯೋಗಿಸುತ್ತ
ದ್ವೇಷ -ಅಸೂಯೆಗಳನ್ನು ದೂರವಿಟ್ಟು
ಈ ಶರೀರ ಶಕ್ತಿಯನ್ನು ಕುಂದಿಸದೆ ಕಾಪಾಡುತ್ತಿದೆ !

– ಶ್ರೀ ಹರಿ.

www.srilharikhoday.com

# ಚಿಂತನೆ

ಆರ್ಶೀರ್ವಾದ ಎಂಬ ಮಹಾನ್ ಶಕ್ತಿಯ ಹಂದರದಲ್ಲಿ ಭಕ್ತಿಯೆಂಬ ಅಸ್ತ್ರಗಳನ್ನು ಉಪಯೋಗಿಸಿ, ಈ ಶರೀರವೆಂಬ ಉಪಕರಣ ಸರಿಯಾದ ಕೆಲಸಕ್ಕೆ ಮಾತ್ರ ಉಪಯೋಗಿಸಿದರೆ

ಧರ್ಮವೆಂಬ ಶಕ್ತಿಯು ನಮ್ಮನ್ನು ಕೈಯಿಡಿದು ಮೇಲೆತ್ತಿ ಈ ಶರೀರ ಉಪಕರಣದ ಅನೇಕ ಸಾಧನೆಯ ಕಾರ್ಯಗಳನ್ನು ಹೆಚ್ಚಿಸುತ್ತ ಅಳಿಯಲಾಗದ ಪ್ರಕೃತಿಯ ಶಕ್ತಿಗೆ ಹೆಮ್ಮೆ ತರಿಸುವುದು !

– ಶ್ರೀ ಹರಿ.

www.sriharikhoday.com

# ಚಿಂತನೆ

ಸುಳ್ಳಿನ ಬುನಾದಿಯಿಂದ ಯಾವ ಕಟ್ಟಡವೂ ಕಟ್ಟಲಾಗದೆಂದು ತಿಳಿದರೂ ಒಂದೇ ರಾತ್ರಿಯಲ್ಲಿ ಸಿರಿವಂತನಾಗಬೇಕೆಂಬ ಆಸೆಗಳ ಹಿಂದೆ ಸುಳ್ಳು ಮಾತುಗಳ ಮಾಲೆಯ ಜೋಡಣೆ ವಿಚಿತ್ರ ಎಂದು ತಿಳಿದರೂ ಕೂಡ ಮನವು ಕೂಗಿ ಹೇಳಿದರೂ ಕಿವುಡು ಮನವು ನನಗೆ ಸಿರಿತನ ದೊರಕುವುದು ಎಂಬ ನಂಬಿಕೆಯಿಂದ ಒಂದು ಸುಳ್ಳಿನಿಂದ ನೂರು ಸುಳ್ಳು ನೂರು ಸುಳ್ಳಿನಿಂದ ಸಾವಿರ ಸುಳ್ಳು ಸಾವಿರಾರು ಸುಳ್ಳಿನಿಂದ ಸಾವಿರಾರು ವರುಷಗಳ ಕೆಟ್ಟ ಹೆಸರು!

– ಶ್ರೀ ಹರಿ.

www.srikarikhoday.com

# ಚಿಂತನೆ

ಅಸೂಯೆ ಕೋಪಕ್ಕೆ ಕಾರಣವಾದರೆ
ಶಾಂತಿ ಮತ್ತು ಪ್ರೀತಿ ಜೀವನಕ್ಕೆ ಸೊಗಸನ್ನು ತರಿಸುವುದು
ಜಗಳಗಳು ಹೊಡೆದಾಟಗಳಿಗೆ ಕಾರಣವಾದರೆ
ಗೆಳೆತನ ಪ್ರೀತಿಯಿಂದ ಬಾಂಧವ್ಯವನ್ನು ಬೆಳೆಸುವುದು
ಬೇಸರ ಸಂಸಾರದಲ್ಲಿ ಸಂಬಂಧಗಳು ಕಷ್ಟಕ್ಕೆ ಕಾರಣವಾದರೆ
ತುಟಿಯ ಮೇಲಿನ ನಗೆ ಪ್ರೀತಿ ತುಂಬಿದ ಕಣ್ನೋಟ
ಮರುಕ್ಷಣವೇ ಸುಖವನ್ನು ತರಿಸುವುದು

– ಶ್ರೀ ಹರಿ.

www.srikaritoday.com

# ಚಿಂತನೆ

ದುಷ್ಟರ ಜೊತೆಗೆ ನಮ್ಮ ಕಷ್ಟ ಖಂಡಿತ
ವ್ಯಾಪಾರದ ಜೊತೆಗೆ ಬಿನ್ನಾಭಿಪ್ರಾಯಗಳು ಖಂಡಿತ
ಸಂಸಾರದಲ್ಲಿ ಒಳಜಗಳಗಳು ಖಂಡಿತ
ಅವಸರ ಅವಸರವುಳ್ಳ ನಿರ್ಧಾರಗಳಿಗೆ ಟೀಕೆಗಳು ಖಂಡಿತ
ಎದೆಗಾರಿಕೆಯುಳ್ಳ ಮನ ಭವಿಷ್ಯಕ್ಕೆ ಶುಭ ಖಂಡಿತ
ಚಾಡಿಕೋರ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದು ಖಂಡಿತ
ಜೂಜುಗಾರ ತನ್ನ ಆಸ್ತಿಯನ್ನು ಕಳೆದುಕೊಳ್ಳುವುದು ಖಂಡಿತ
ದಿನಕರನ ಉದಯವು ದಿನವೂ ಖಂಡಿತ!

– ಶ್ರೀ ಹರಿ.

www.sriharikhoday.com

# ಚಿಂತನೆ

ನಮ್ಮಲ್ಲಿರುವ  ಸಿರಿತನವನ್ನು ಹುಡುಕೋಣ
ನಮ್ಮಲ್ಲಿರುವ ಅತಿಯಾದ ಪ್ರೀತಿಯ ನೀರನ್ನು
ಒಣಗಿರುವ ಮನಗಳಿಗೆ ಹರಿಯ ಬಿಡೋಣ
ಅವರ ಜೀವನದಲ್ಲಿ ಬೆಳೆ ಬೆಳೆದು ಸಂತಸಗೊಂಡರೆ
ನಮ್ಮ ಸಿರಿತನವ ಹಂಚಿಕೊಳ್ಳುವುದೇ
ನಮ್ಮಲ್ಲಿರುವ ಚೌಕಟ್ಟಿನ ಶಕ್ತಿ ಎಂದು
ಆ ಚೌಕಟ್ಟನ್ನು ಅಳೆದು ಅನುಭವಿಸಿ
ಅನುಭವಿಸುತ್ತ ಅನುಭವದ ದಾನಿಗಳಾಗೋಣ

- ಶ್ರೀ ಹರಿ.

www.srikanthoday.com

# ಚಿಂತನೆ

ಮಾಡುವುದಕ್ಕೇನೂ ಕೆಲಸವಿಲ್ಲದಿದಲ್ಲಿ
ಆ ಸಮಯ . . ನಿನ್ನನ್ನು ನೀನು ಸರಿಪಡಿಸಿಕೋ
ಈ ರೀತಿ ಮಾಡಿದ್ದಲ್ಲಿ ಯಾರೂ ನಿನನ್ನು
ಟೀಕಿಸುವ ಬದಲು ಶ್ಲಾಘಿಸುವರು !
ಮಾಡುವುದಕ್ಕೇನೂ ಕೆಲಸವಿಲ್ಲದ್ದಲ್ಲಿ
ಜೊತೆಗಿರುವರ ಕಷ್ಟಗಳಲ್ಲಿ ಬೆರೆತಿಕೋ
ಈ ರೀತಿ ಮಾಡಿದ್ದಲ್ಲಿ ಸಮಾಜ ನಿನ್ನ ಮೇಲೆ
ಹೆಮ್ಮೆ ಪಟ್ಟು ನಾಯಕನನ್ನಾಗಿ ಮಾಡುವುದು !

- ಶ್ರೀ ಹರಿ.

www.shikhartoday.com

# ಚಿಂತನೆ

ಮನುಷ್ಯ ಎಂದರೆ ಕೋಟಿ ಸ್ವಭಾವವುಳ್ಳವನು
ಅವನ ಬುದ್ಧಿ ಎಂದರೆ ದಶಕೋಟಿ ಸ್ವಭಾವವುಳ್ಳದ್ದು
ತನ್ನಲ್ಲಿರುವುದನ್ನು ಅನುಭವಿಸಲು ಮಾನವನಿಗೆ ಸಮಯದ ಅಭಾವ
ಬುದ್ಧಿಗೆ ತಾನೇನೆಂದು ಅರಿಯಲು ಜೀವನವೇ ಸಾಲುವುದಿಲ್ಲ!
ಸ್ವಭಾವದಿಂದ ಆಸೆ , ಬುದ್ಧಿಯಿಂದ ಆಸೆಯ ಪಾಲನೆ
ದೇಹ ಬುದ್ಧಿ ಬಿಟ್ಟು ಇರಲು ಮಾನವನಿಗೆ ತಿಳಿಯದೆ
ಸತ್ಯ ತಾನೇ ದೂರಾಗಿ ಜೊತೆ ಬೆರೆಯಲು ಆಸೆ ಪಡದೆ
ಕಣ್ಣೆದುಗಿರುವ ಸತ್ಯ ಅದೃಶ್ಯವಾಗಿ ಬಚ್ಚಿಟ್ಟುಕೊಂಡು ಹೋಗಿದೆ!

– ಶ್ರೀಹರಿ.

www.sriharikhoday.com

# ಚಿಂತನೆ

ಜೀವನದ ಜೊತೆ ಶರೀರ ಬೆಳೆಯುತ್ತಿದೆ
ಶರೀರದ ಜೊತೆಗೆ ಮನಸ್ಸು ಬೆಳೆಯುತ್ತಾ ಬೆಳೆಯುತ್ತಾ
ಮನಸ್ಸು ಶರೀರವನ್ನು ಬಿಟ್ಟು ಬೆಳೆದು
ಶರೀರದ ಒಡೆತನ ಪಡೆದಿದೆ !
ಪವಿತ್ರವಾದ ಶರೀರದಿಂದ ಪವಿತ್ರ ಭಾವನೆಗಳು ಬರದೆ
ಒಂದೇ ಪಾತ್ರೆಯಲ್ಲಿ ನಾನಾ ಭಕ್ಷಗಳ ಮನೋ ಅಡಿಗೆ
ಅಡುಗೆ ಸರಿಯಿಲ್ಲ. . ಅದೃಷ್ಟ ಸರಿಯಿಲ್ಲ
ಶರೀರ ಅವತರಿಸಿರುವ ಸಮಯ ಸರಿಯಿಲ್ಲ ಎಂದು
ಶರೀರದಿಂದ ಹುಟ್ಟಿದ ಮನಸ್ಸು ಶರೀರಕ್ಕೆ ನಿಂದಿಸುತ್ತಿದೆ

– ಶ್ರೀ ಹರಿ.

# ಚಿಂತನೆ

ನಾವು ಪ್ರಪಂಚವನ್ನೇ ಸರಿ ಪಡಿಸುವೆನೆಂದರೆ ಆಗದು
ನಾವುಗಳು ನಮ್ಮನ್ನೇ ನಾವು ಸರಿಪಡಿಸುವೆನೆಂದರೆ
ಆಗುವುದು
ಜೊತೆ ಜೀವಿಸುತ್ತಿರುವ ನಾವು ಎಲ್ಲರ ಜೊತೆ ಜೀವಿಸುತ
ಉದಯಿಸುತ್ತಿರುವ ಸಮಾಜದ ಮಕ್ಕಳ ಏಳಿಗೆಗೆ
ನಮ್ಮ ಜೀವಿಸುವ ಸಮಯಗಳಲ್ಲಿ ಕಾಲವನ್ನು ನೀಡಿ. . .
ಈ ಪ್ರಪಂಚದಲ್ಲಿ ಜೀವಿಸುತ್ತಿರುವ ಸಮಾಜಕ್ಕೆ
ಹೊಸ ತರಹದ ಜೀವನಕ್ಕೆ ತಳಹದಿ ಕಟ್ಟುತ
ಅಸಾಧ್ಯವನ್ನು ಸಾಧ್ಯವಾಗಿಸೋಣ !

– ಶ್ರೀ ಹರಿ.

www.shrihariknoday.com

# ಚಿಂತನೆ

ನಾವುಗಳು ನೆನಪುಗಳ ಗುಂಪು ಕಟ್ಟುತ್ತ, ನೆನಪುಗಳಿಗೆ
ಶಿಸ್ತನ್ನು ಕಲಿಸಿ
ಸುಖದ ಗುಂಪುಗಳ ಕಷ್ಟದ ಗುಂಪುಗಳೆಂದು ಜೋಡಿಸಿ
ನಮಗೆ ಬೇಕಾದಾಗ ಉಪಯೋಗಿಸಿಕೊಳ್ಳಲು
ಸಾಮರ್ಥ್ಯವನ್ನು ಗಳಿಸಿ
ಕಷ್ಟಗಳು ತಿಳಿಯದ ಹೂವಿನಂತೆ ಜೀವಿಸಿ
ಜೀವನದ ಗಂಧದ ಕುಸುಮವನ್ನು ಹಂಚುತ
ಜೊತೆ ಕಾಣಿಸುತ್ತಿರುವ ಭವಿಷ್ಯದ ಸರಮಾಲೆಯನ್ನೇ
ಜೋಡಿಸುತ

www.srikrishnoday.com

# ಚಿಂತನೆ

ಕಾಲದ ಜೊತೆ ಭೂತ ಭವಿಷ್ಯ ವರ್ತಮಾನಗಳಲ್ಲಿ ತೃಪ್ತಿಯನ್ನೇ ಕಾಣುತ ನಮ್ಮ ಅಂತರಾಳದಲ್ಲಿರುವ ಮಹಾನ್ ಶಕ್ತಿಯ ಮತ್ತೆ ಮತ್ತೆ ನೆನಪಿಸಿಕೊಂಡು ಪೂಜಿಸೋಣ !

\- ಶ್ರೀ ಹರಿ.

www.sriharikhoday.com

# ಚಿಂತನೆ

ನಮ್ಮದೇ ಆದ ಶಾಂತಿಯ ಮನೋ ಕೊಠಡಿಯಲ್ಲಿ
ದಿನವೂ ಒಂದು ಸಲ ಹೋಗಿ ಬರುತ್ತಿರುವುದು
ನೆಮ್ಮದಿಯಿಂದ ಬಂದ, ತಪೋಬಲ ಬಂದ ಹಾಗೆ
ಅಸಾಧ್ಯಗಳ ಸಾಧ್ಯತೆಗಳ ಮಾಡುತ್ತಿರೆ ಹಂಬಲ ಹೆಚ್ಚುತ್ತಿದೆ!
ಒಲೆಯ ಮೇಲೆ ಅನ್ನದ ಪಾತ್ರೆ ಅಡುಗೆಯಾದ ಮೇಲೆ
ಒಲೆಯಿಂದ ಕೆಳಗಿಳಿಸಿದರೂ ಪಾತ್ರೆ ಬಿಸಿಯಿರುವಂತೆ
ನಮ್ಮ ಮನೋ ನೆಮ್ಮದಿಯ ಕೋಣೆಯ ಪ್ರಭಾವ
ಹೊರಗೆ ಬಂದರೂ ನೆಮ್ಮದಿಯಿರುವಂತೆ !

– ಶ್ರೀ ಹರಿ.

www.srihariKhoday.com

# ಚಿಂತನೆ

ಸಂಕಲ್ಪದ ಫಲವತ್ತಾದ ಬೀಜಗಳಿಂದ
ಸಿದ್ಧಿಯೆಂಬ ಎಣ್ಣೆ ಹರಿದಾಡಬೇಕಿದ್ದರೆ
ಮನೋ ಎಂಬ ಗಾಣದಲ್ಲಿ ಹರಿಯುತ್ತಲೇ ಇರಬೇಕು!
ಕಾದು ಕುಳಿತುಕೊಳ್ಳದೆ ಗಾಣ ತಿರುಗತ್ತಲೇ ಇರುವಾಗ
ಮನೋ ಶಂಕೆಗಳಿಂದ ಗಾಣ ನಿಲ್ಲಿಸಿ,
ಬೀಜದಿಂದ ಫಲ ಬಂದಿಹುದೇನೋ ಎಂದು ನೋಡಿದರೆ
ಎಣ್ಣೆ ಕಾಣದೆ ನಿರಾಶೆಯಾಗಿ ಗಾಣ ಹರಿಯುವುದನ್ನು
ನಿಲ್ಲಿಸಿದರೆ
ಮೂರ್ಖತನದ ಪರಮಾವಧಿ! – ಶ್ರೀ ಹರಿ.

www.shriharikhoday.com

# ಚಿಂತನೆ

ದುಡಿಯುವ ಕೈಯ್ಯ ಮುಷ್ಠಿಯಲ್ಲಿ
ಪವಿತ್ರ ದೇವರು ಕಾಣದೇ ಇರುವನು
ಬೇರೆಯವರಿಗೆ ಸಹಾಯ ಹಸ್ತ ನೀಡಿ
ತಬ್ಬಿಕೊಂಡು ಸಹಾಯ ಮಾಡುವ ಕೈಗಳಲ್ಲಿ
ಅಲ್ಲಿ ಸದ್ದಿಲ್ಲದೆ ದೇವರು ಅಡಗಿರುವನು
ಕೈಚಾಚಿ ಬೇಡಿ ಸ್ವೀಕರಿಸುವುದು ಧರ್ಮ
ಕೈಚಾಚಿ ಕಸಿದುಕೊಳ್ಳುವುದು ಪಾಪ
ಮನದಲ್ಲಿ ಬೇರೆಯವರ ಸ್ವತ್ತನ್ನು ಕಸಿದುಕೊಳ್ಳಲು ನೆನೆದರೆ
ನೆಮ್ಮದಿ ಅವನನ್ನು ಮರೆಯುತ್ತದೆ !

– ಶ್ರೀ ಹರಿ.

www.sriharikoday.com

# ಚಿಂತನೆ

ಬೇರೆಯವರ ಸುಖ ಬಯಸುವ ಭಾವನೆ ನಮ್ಮ ಮನವು ಕಲಿತರೆ
ದಿವಸಗಳು ಬೇಕಿಲ್ಲ ಕ್ಷಣ ಕ್ಷಣದಲ್ಲಿಯೇ ಸುಖದ ಅರಿವುವಾಗುವುದು
ನಮ್ಮ ಕಷ್ಟಗಳು ತಾನೇ ಕಳೆದುಹೋಗಿ ಸುಖದ ಚಿಗುರು ಯೋಚಿಸಿ ಕಾಣುವ ಮುಂಚೆ ನಮ್ಮೆದುರಿಗೆ ಕಾಣುತ್ತದೆ,ಕಡಿಮೆ ಆದ ಕಷ್ಟಗಳು
ಕನಸುಗಳು ನನಸಾಗುತ್ತ ಬೇರೆಯವರು ನಮ್ಮ ಕಷ್ಟದಲ್ಲಿ ಬೆರೆತು



www.sriharikhoday.com

# ಚಿಂತನೆ

ಮುಳ್ಳಾಗಿರುವ ಕಷ್ಟಗಳನ್ನು ಬೇರೆಯವರು ಗುಡಿಸಿ
ಸುಖದ ಹಾದಿಯ ಸಜ್ಜು ಮಾಡುತ್ತ
ಹೆಚ್ಚು ದಿನಗಳು ನಮ್ಮ ಜೊತೆಗಿರಬೇಕೆಂಬ ಬಯಕೆ
ಮನದ ದಿಗಂತ ಮುಂದೆ ಕಾಣುವುದು

- ಶ್ರೀ ಹರಿ.

www.srikhoday.com

# ಚಿಂತನೆ

ಸತ್ಯದ ಬೇಡಿಕೆ ಇದ್ದಲ್ಲಿ ಸಾಧನೆ ಶೀಲರಾಗಬೇಕಾದ್ದಲ್ಲಿ
ನಮ್ಮ ಜನ್ಮ ಸಾರ್ಥಕ ಮಾಡಬೇಕಾದ್ದಲ್ಲಿ
ಬುನಾದಿಯಾದ ಪ್ರೀತಿ ಬರಿ ಬುನಾದಿಯಾಗದೆ
ಸುಮ್ಮನಿರದ ಸೂರ್ಯನಂತೆ ಎಚ್ಚರಗೊಂಡು
ದಿನಚರಿಯ ಕೆಲಸಗಳಲ್ಲಿ ನೆನಪುಗಳ ಹಾದಿ ತಿಳಿದುಕೊಂಡು
ಪ್ರೀತಿಯ ಆಧಾರದ ಮೇಲೆ ಜೀವನ ನಡೆಸದೆ ಇದ್ದರೆ
ಜೀವನ ವ್ಯರ್ಥವಾಗುವುದು

– ಶ್ರೀ ಹರಿ.

www.sriharikhoday.com

# ಚಿಂತನೆ

ದೊರಕಿಸಿಕೊಳ್ಳಲು ಬೇಡಿಕೆ ಇಲ್ಲ
ಕೈ ಇಲ್ಲದ ಕಾಲಕ್ಕೆ ನನ್ನನ್ನು ಹಿಡಿದು ಎತ್ತಲಾಗಲಿಲ್ಲ
ಕಾಲದ ಪಾಡು ಕಾಲಕ್ಕೆ, ವೇಗವಾಗಿ ಓಡುತ್ತಿರುವ ಜಗತ್ತಿಗೆ
ಬಿಡಿಸಲಾಗದ ಒಗಟು . .ಕಷ್ಟ ಕೇಳಲಾಗದ ಕಷ್ಟ
ಗಾಳಿಯ ಬಿಟ್ಟು ಎಲ್ಲವೂ ಹುಡುಕಾಡುವ ಜೀವಕ್ಕೆ
ಇರುವಿಕೆಯ ಅರಿವಿಲ್ಲದೆ ನನ್ನಲ್ಲಿ ನನ್ನ ಜೀವ ನಷ್ಟವಾಗಿದೆ!
ಬೇಡಿಕೆಗಳು ಕೈ ಚಾಚಿದರೆ ತಿರುಕ ಎನ್ನುವರು
ಬೇಡಿಕೆಗಳು ಸುಮ್ಮನಿದ್ದರೆ ಬೇಡದ ಸನ್ಯಾಸಿ ಎನ್ನುವರು

– ಶ್ರೀ ಹರಿ.

www.srihariktoday.com

# ಚಿಂತನೆ

ಅಜ್ಞಾನ ಏನೆಂದು ತಿಳಿದ ನಾವುಗಳು, ಜ್ಞಾನವನ್ನು ನಮ್ಮೊಳಗೆ
ಹೇಗೆ ಹುಡುಕುವುದು, ನಮ್ಮಲ್ಲೇ ಅಗೋಚರ ಶಕ್ತಿ ಇದೆ
ಎಂದರೆ
ಹಂತ ಹಂತದಲ್ಲಿ ಅಜ್ಞಾನ ಕರಗಿ ಹೋಗುತ್ತದೆ
ನಮ್ಮಲ್ಲಿರುವ ಆತ್ಮನ ಜೊತೆ ಬೆರೆತು ಸತ್ಯವನ್ನು ಹುಡುಕುವ
ಸಾಹಸ ಮಾಡೋಣ, ವಿವೇಕವನ್ನು ಎಚ್ಚರದಿಂದ ಎಚ್ಚರಿಸಿ
ಅಂತರಾಳದ ಬೆಳಕನ್ನು ನೋಡಿ ಅನುಭವಿಸಿ
ಆ ಅನುಭವದಿಂದ ದೇವರನ್ನು ಬೆರೆಯುವ ವಿಧಾನ
ಕಲಿಯೋಣವೇ ಹೇ ಮನ ವೇ

– ಶ್ರೀ ಹರಿ.

www.Sriharikhoday.com

# ಚಿಂತನೆ

ಹೇ ವಿಶ್ವದ ಗೆಳೆಯ. ವಿಶ್ವ ನಿರ್ಮಾಪಕದ ಸಹಪಾಠಿಯೇ..
ನೀ ದೇವರಲ್ಲಿ ಬೆರತು ಬೇಕಿರುವ ಶಕ್ತಿಯನ್ನು ತಾನೇ
ಬೆಳೆಸಿಕೊಂಡು
ಭೂತ-ಭವಿಷ್ಯ-ವರ್ತಮಾನಗಳು ನಿನ್ನಕಲ್ಪನೆಗಳ ಇಚ್ಛೆಯಾಗಿ
ತರಂಗಗಳನ್ನು ಭಾಷೆಗಳಲ್ಲಿ ಮಾತನಾಡುವ ನಿನಗೆ
ವಿಶ್ವದಲ್ಲೇ ಸುಖ ಮಾತ್ರ ಕೊಟ್ಟು
ವಿಶ್ವದಲ್ಲಿ ಎಲ್ಲರ ಬೇಡಿಕೆಗಳನ್ನು ಈಡೇರಿಸಿ
ನಿನ್ನ ಅರ್ಥಮಾಡಿಕೊಳ್ಳುವ . .ಜೀವ,
ತುಂಬಿಕೊಳ್ಳುವ ಆತ್ಮದ ತರಂಗಗಳಿಗೆ ಮೇಲೆತ್ತಿ ಶೀಘ್ರದಲ್ಲೇ
ನಮಗೆ ಜೀವಿಸುವ ಹೊಸ ರೀತಿಯನ್ನು ತೋರಿಸು

- ಶ್ರೀ ಹರಿ.

www.Sriharikhoday.com

# ಚಿಂತನೆ

ಬೇಡದ್ದನ್ನು ಆಶಿಸಿ ದೊರಕದೆ ಹೋದರೆ ದು:ಖ
ಬೇಕಿದ್ದನ್ನು ಬಯಸಿದರೆ ಸುಖ ದೊರೆಯುವುದು ಖಂಡಿತ
ಬಯಕೆಗಳ ಈಡೇರಿದ ಮೇಲೆ ಬೇಡಿದ್ದು ದೊರಕಿ
ಎಲ್ಲರ ಜೊತೆ ತನ್ನ ಭಾವನೆಗಳನ್ನು ಹಂಚಿಕೊಂಡು ಸಂತಸ ಪಡು!
ಅಹಂಕಾರದಿಂದ ಬೇರೆಯವರಿಗೆ ಕೋಪ ತರಿಸಬೇಡ
ಎದುರಿಗೆ ಆಡುವ ಮಾತುಗಳನ್ನು ತಿಳಿದು
ತಮ್ಮಗಳ ತಪ್ಪು ಅರಿವಾದ ಮೇಲೆ ಅವರೆದುರು ತಲೆತಗ್ಗಿಸಿ ಒಪ್ಪಿಕೊಂಡರೆ
ದ್ವೇಶಿಸುವವರು ನಿನ್ನನ್ನು ಪೂಜಿಸಿ ಅಪ್ಪಿಕೊಳ್ಳುವರು

– ಶ್ರೀ ಹರಿ.

# ಚಿಂತನೆ

ಬೇರೆಯವರ ಜೀವನದಲ್ಲಿ ಬೆಳಕು ಹರಿಸಿ
ನಮ್ಮಲ್ಲಿರುವ ಕತ್ತಲಿಗೆ ಬೆಳಕಿನ ಹಾದಿ ತೋರಿಸಿ
ಕಳೆದು ಹೋಗಿರುವ ಸವಿಯನ್ನು ಮಾತ್ರ ನೆನೆಸುತ
ಕಹಿಯನ್ನು ನಮ್ಮಿಂದ ಕಳೆದುಕೊಳ್ಳೋಣ !
ಆಸೆಗಳು ಬೇಡಿಕೆಯಾಗಿ . ಬೇಡಿಕೆಗಳು ಕರ್ತವ್ಯವಾಗಿ
ಮಾಡಿದ್ದನ್ನೆಲ್ಲಾ ಮರೆತು ಹೊಸ ಕೆಲಸಗಳ ಹೊಸ್ತಿಲುಗಳಿಗೆ
ಸಾಧನೆ ಇಷ್ಟಗಳು ತೋರಣವಾಗಿ
ನಮ್ಮನ್ನು ನೋಡುವವರೆಲ್ಲ ನಿಮ್ಮ ಮನದ ಕಟ್ಟಡ
ಸುಂದರವಾಗಿದೆ
ಎಂದು ನುಡಿಯುವಂತೆ ಮಾಡೋಣ ! - ಶ್ರೀ ಹರಿ.



www.sriharikhoday.com

# ಚಿಂತನೆ

ಸತ್ಯವನ್ನು ಪೂರ್ಣ ರೀತಿಯಿಂದ ಬಳಸಿಕೊಂಡರೆ
ಸತ್ಯ ಜೀವನವೆಲ್ಲ ಜೊತೆಗಿರುತ್ತದೆ
ಸತ್ಯವನ್ನು ಕ್ಷಣಿಕವಾಗಿ ಬಳಸಿಕೊಂಡರೆ
ಸುಳ್ಳಿನ ರೂಪ ಪಡೆದು ಮುಂಬರುವ ಕಾಲದಲ್ಲಿ
ಕಷ್ಟಗಳು ಕೇಳದೆ ಸಾಲು ಸಾಲಾಗಿ ಎದುರಾಗುವುವು !
ಉತ್ತಮ ನಿರ್ಧಾರವನ್ನು ಮಾಡಲು ಸತ್ಯ ಬೇಕೇ ಬೇಕು,
ಸತ್ಯದಿಂದ ನಮ್ಮನ್ನು ನಾವೇ ಅಳೆದುಕೊಂಡು,
ನಮ್ಮ ಅಂತರಾಳದ
ಶಕ್ತಿಯನ್ನು ಹೆಚ್ಚಿಸಿಕೊಂಡು,ಕೈ ಹಿಡಿದಿರುವ
ಕಾರ್ಯಕ್ರಮಗಳಿಗೆ
ಪೂರ್ಣ ರೂಪವನ್ನು ಕೊಡಬಹುದು - ಶ್ರೀ ಹರಿ.



www.srihankhoday.com

# ಚಿಂತನೆ

ಕೆಲಸದಲ್ಲಿ ಸುಖ . . .ಕೆಲಸದಲ್ಲಿ ಉತ್ಸಾಹ
ಹಿಂದನ್ನು ನೆನೆಯದೆ ಕೆಲಸಗಳು ಮುಂದರಲ್ಲಿ
ತಾನು ತನ್ನದು ಮರೆತು
ಬೆರೆಯುವ ಕೆಲಸಗಳಲ್ಲಿ ಯಶಧಿಧಿಸ್ಸಿನ ಅನುಭವ
ಕೆಲಸದ ನಿರಂತರ ಚಿಂತೆಯಲ್ಲಿ
ಹೆದರಿಕೆಯ ಸಮಯವಿಲ್ಲ ಪಕ್ಷಪಾತಗಳಿಗೆ ಸಮಯವಿಲ್ಲ
ಕೆಟ್ಟದ್ದನ್ನು ಮಾಡಲು ನೆನೆಯಲು ಆಗುವುದಿಲ್ಲ
ಮೋಸಗಳನ್ನು ಮಾಡಲು ಸಮಯವಿಲ್ಲ
ಸುಖ ನಮ್ಮಲ್ಲಿ ತಲೆಯೆತ್ತಿ ಕಾಣಿಸುತ್ತದೆ !      - ಶ್ರೀ ಹರಿ.

www.sriharikhoday.com

# ಚಿಂತನೆ

ಕರುಣೆ, ಕೋಪ, ಕಾಮ ಮನೋವಾಣಿಗಳ ಪ್ರತಿಬಿಂಬಗಳು
ಸತ್ಯದ ಕನ್ನಡಿ ಇದ್ದುದ್ದನ್ನೇ ಪ್ರತಿಬಿಂಬಿಸುತ್ತಿರುವುದು ದೇವರ
ಚಮತ್ಕಾರ
ಜೀವನ ಸಾರ್ಥಕ ಎನಿಸುವ ಅನುಭವಗಳನ್ನು
ಹಂತ ಹಂತದಲ್ಲಿ ಮನೋವಾಣಿ ಚಿಗುರಿಸುತ್ತ
ತಾನೇ ನೀಡುವ ಪ್ರೀತಿಯನ್ನು ಪಡೆಯುತ್ತ
ಯಾರಿಂದಲೂ ಕಲಿಯದೇ ಇರುವ
ಯಾರೂ ಕಲಿಸಲಾಗದ ಅಂತರವಾಣಿಯ ಜ್ಞಾನ
ಜೀವನದ ಜೊತೆಗೆ ನಮ್ಮನ್ನು ದೇವರ ಜೊತೆ ಬೆರೆಸುತ್ತಿದೆ!

– ಶ್ರೀ ಹರಿ.

www.srihariktoday.com

# ಚಿಂತನೆ

ಕಲ್ಲುಗಳಿಲ್ಲದ ಭದ್ರ ಕಟ್ಟಡ ಮನಸ್ಸು
ನಿಜವಲ್ಲದ್ದನ್ನು ಸತತ ಸಾಧಿಸಲು ಯತ್ನಿಸುವುದು ಮನಸ್ಸು
ಅಧಿಕಾರಕ್ಕೆ ನಿರಂತರ ದುಡಿದು,
ನಮ್ಮಲ್ಲಿರುವ ಮನಸ್ಸು ನಮ್ಮ ಆಳವನ್ನು ನೋಡುತ್ತಿದೆ ,
ತಾನು ಹೇಳಿದ್ದೇ ಸರಿ ಎಂಬ ಸಾಧಧಿನೆಯ ಪ್ರವೃತ್ತಿ
ಬೇಕಾದ್ದನ್ನು ಮಾತ್ರ ಗ್ರಹಿಸಿಕೊಂಡು
ಬೇಕಾದ ನೋಟದ ಬಣ್ಣವನ್ನು ನೋಡುತ್ತ , ಅಸೂಯೆ ,
ಕ್ರೂರತ್ವದಲ್ಲಿ
ಆದರ್ಶಪ್ರಾಯವಾಗುವ ಮನೋಹೆಗ್ಗಳಿಕೆ, ನಮ್ಮಲ್ಲಿ ಜ್ಞಾನ
ಇರಬೇಕೆಂಬ ಭ್ರಮೆ ಮನಸ್ಸು ಹುಟ್ಟಿಸುತ್ತಲೇ ಇದೆ

– ಶ್ರೀ ಹರಿ.

www.snehalkitoday.com

# ಚಿಂತನೆ

ಹುಟ್ಟಿನಿಂದಲೇ ಜೊತೆ ಬೆಳೆಯುವುದು ಕಷ್ಟ
ಕಷ್ಟವೇ ಇಲ್ಲವೆಂದು ಹೇಳುವ ಮಾತು ಸುಳ್ಳು
ಕಷ್ಟಗಳೆಲ್ಲಾ ಮುಂಬರುವ ಸುಖದ ನೆರಳು
ಸುಖ ಅನೇಕ ಕಷ್ಟಗಳ  ಆಶೀರ್ವಾದ
ಹೂವಿನ ಜೊತೆ ಮುಳ್ಳಿಗೆ ಜಗಳವಿಲ್ಲ
ಮುಳ್ಳಿನ ಜೊತೆ ಹೂವಿಗೆ ಜಗಳವಿಲ್ಲ
ಮುಳ್ಳು ಹೂವನ್ನು ಕಾಪಾಡುವಂತೆ
ಕಷ್ಟಗಳ ಅನುಭವ ಸುಖವನ್ನು ಕಾಪಾಡುತ್ತದೆ

- ಶ್ರೀ ಹರಿ.

www.srikarikoday.com

# ಚಿಂತನೆ

ವಿಶ್ವದ ಶಕ್ತಿ ಆತ್ಮ. . ಆತ್ಮನಿಗೆ ಬೇಕಾದ ಚಿತ್ತ
ಚಿತ್ತಕ್ಕೆ ಬೇಕಾದ ಕಾಲ, ಕಾಲದ ಸಂಕಲ್ಪಗಳು
ನಮ್ಮ ಕಾಲು ಹೆದರಿಕೆಯಿಲ್ಲದೆ ಮುಂದೆಜ್ಜೆ ಹಾಕುವಂತೆ
ಹೆದರಿಕೆ ಬೆದರಿಕೆ ಸಂಚುಗಳು ಲೆಕ್ಕಿಸದೇ ಇದ್ದರೆ
ಹಗಲಿನ ಸಾಧನೆಯ ಉದ್ದೇಶಗಳು ಉದ್ದೇಶಗಳ
ಸಂಕಲ್ಪ ಎಂದರೆ
ಹೊಸ ಹೊಸ ಬಣ್ಣದಿಂದ ಸಾಧನೆಗಳು ರೂಪವಾಗಿ
ಎದ್ದು ನಿಂತು
ಸಾಧನೆಯ ಯಶಸ್ಸನ್ನು ಕಂಡು ಆತ್ಮನು ಸುಖಪಡುವುದು

– ಶ್ರೀ ಹರಿ.

www.sriharikhoday.com

# ಚಿಂತನೆ

ಮಾನವ ಹಸುಳೆಯ ಮನಸ್ಸನ್ನು ತಿಳಿದುಕೊಳ್ಳದೆ
ಮಾನವ ಪ್ರತಿಷ್ಠೆ ಭಾವನೆಯನ್ನು ಬೆಳೆಸಿಕೊಳ್ಳುತ್ತ
ತನ್ನದೇ ಆದ ಹಸುಳೆಯ ಹುಟ್ಟು ಗುಣ ಮರೆತು
ಹೊಸ ಹೊಸ ಗುಣ ಗುಣದಲ್ಲಿ ಹೋಲಿಕೆ
ರುಚಿ ಏನೆಂದು ತಿಳಿಯದ ನಾಲಿಗೆಯಂತೆ
ಅಂಚು ಇಲ್ಲದ ಸಂಚುಗಳ ಮಾಡುತ್ತ
ಪವಿತ್ರವಾದ ಹಸುಳೆಯ ಮನಸ್ಸನ್ನು ಮರೆತು
ಹೆದರಿಸಲು ಕಾಣದ ಪಿಚಾಚಿಯಾಗುತ್ತಿದ್ದಾನೆ.

– ಶ್ರೀ ಹರಿ.

www.srikaritoday.com

# ಚಿಂತನೆ

ಹೆಜ್ಜೆ ಹೆಜ್ಜೆಗೂ ಸಂಶಯ ಕೆಲಸಕ್ಕೆ ಬರದ ಕಾಯ
ತಮ್ಮಿಂದಲೇ ತಾವೇ ಮಾಡಿಕೊಳ್ಳುತ್ತಿರುವ ಮನೋಕಾಯ
ಪವಿತ್ರವಾದ ಮನಸ್ಸಿಗೆ ಮಾಡಿಕೊಳ್ಳುತ್ತಿರುವರು ಅನ್ಯಾಯ
ಎಂದೆಂದಿಗೂ ನೀಡಲಾರರು ಬೇರೆಯವರಿಗೆ ಆಶ್ರಯ
ಎಲ್ಲೂ ಆಶ್ರಯ ಸಿಗದ ಮನೋನಿಲಯ!
ಹೆಜ್ಜೆ ಹೆಜ್ಜೆಗೂ ಬೇಕಾಗಿದೆ ಅವರಿಗೆ ಸಹಾಯ
ಮನದ ಕಟ್ಟಡ ಕಟ್ಟದೆ ದಿನವೂ ಹಾಕುತ್ತಿರುವರು
ಮನದ ಹೊಸ ಹೊಸ ಅಡಿಪಾಯ
ಆಗ ಬಯಸುತ್ತಿರುವರು ತಮ್ಮ ಹೆಸರು ಜನಪ್ರಿಯ
ಎಂದೂ ಕಾಣರು ಜೀವನ ದಿಗಂತದಲ್ಲಿ ನವೋದಯ

- ಶ್ರೀ ಹರಿ.

www.srilankatoday.com

# ಚಿಂತನೆ

ಬದುಕಿನಿಂದ ಬೆಳೆದ ಸಂಸಾರದ ಹೊರೆ
ಬಿಡಿ ಬಿಡಿಯಾಗಿಸಿ ಇದು ಇಂದು . .ಅದು ನಾಳೆಗೆ ಎನ್ನುತ
ಮನದ ತೋಟದಲ್ಲಿ ಒಕ್ಕಲನ್ನು ಮಾಡುತ
ಬೇಡಿಕೆಯ ಬೆಳೆಗಳನ್ನು ನಾವೇ ಬೆಳೆಸಿಕೊಂಡು,
ಬೇರೆಯವರಿಗೆ ನೀಡಿ
ಜೀವಿಸಲು ದೇವರು ಕೇಳದೆ ಕೊಟ್ಟಿರುವ ಗಾಳಿ
ಉಪಯೋಗಿಸುವಂತೆ
ನಮ್ಮ ಬೇಡಿಕೆಗಳು ದೇವರಿಗೆ ಬಾರ ಎನ್ನುತ
ಪ್ರಯತ್ನಗಳನ್ನು ಕಡಿಮೆ ಮಾಡದೆ ದುಡಿಯುತ್ತಲೇ
ಇರಬೇಕು

– ಶ್ರೀ ಹರಿ.

www.Sriharikhoday.com

# ಚಿಂತನೆ

ನಮ್ಮಲ್ಲಿ ನಮಗೆ ನಂಬಿಕೆ ಇದ್ದರೆ, ದೇವರು ಕೇಳದೆಯೇ
ಜೊತೆಗಾರನಾಗಿ
ದೇವರೇ ನಮ್ಮ ಜೊತೆ ಬಾಳುವನು, ಒಳ್ಳೆಯ
ನಿರ್ಧಾರಗಳನ್ನು ಮಾಡುತ
ಸ್ನೇಹಿತರ ಜೊತೆ ಕಷ್ಟಗಳನ್ನು ಹಂಚಿಕೊಳ್ಳುತ್ತ ,
ಕಷ್ಟ ನಷ್ಟಗಳಿಗೆ ಹೆದರದೆ
ನಾ ಸಾಧಿಸುವೆ ಎಂಬ ನಿರ್ಧಾರ ಮನ ಮಾಡಿದರೆ
ಇಂದು ಮುಂದುಗಳು ಗಣಿಕೆ ಮಾಡದೆ

www.srikarikhoday.com

# ಚಿಂತನೆ

ನಂಬಿಕೆ ಎಂಬುವ ದೇವರು ಕೇಳದೆಯೇ ವರಗಳನ್ನು ನೀಡುವನು
ಜೀವನದಲ್ಲಿ ಮನಬೇಡಿದ ಸುಖಗಳಿಗಿಂತ ಹೆಚ್ಚಿನ ಸುಖಗಳು
ತಮ್ಮನ್ನು ತಾವೇ ನಮ್ಮ ಜೊತೆ ಬೆರೆಸಿ ಕೊಳ್ಳುವುದು !

– ಶ್ರೀ ಹರಿ.

www.srikharikhoday.com

# ಚಿಂತನೆ

ಎಲ್ಲವನ್ನೂ ಎದುರಿಸುವುದೇ ಜೀವನ
ಎಲ್ಲವನ್ನು ತಿಳಿದಿದ್ದರೂ ಸುಮ್ಮನಿರುವುದೇ ಜೀವನ
ಎಲ್ಲವೂ ಇದ್ದು ನನ್ನದೇನೂ ಇಲ್ಲ ಎಂದು ಹೇಳುವುದೇ
ಜೀವನ
ಎಲ್ಲಾ ಕಷ್ಟಗಳಿದ್ದರೂ ನಮ್ಮ ಜೊತೆ ಬರುವುದಿಲ್ಲ
ಎಂದು ಹೇಳುವುದು ಜೀವನ,
ಎಲ್ಲದರಲ್ಲಿಯೂ ಪಾಂಡಿತ್ಯವಿದ್ದರೂ ಹೊಸದನ್ನು
ಕಲಿಯುವುದಿದೆ ಎಂದು ಹೇಳುವುದೇ ಜೀವನ !
ನಮ್ಮದೇ ಬೇರೆ ನಿಮ್ಮದೇ ಬೇರೆ
ಎಂಬ ಭಾವನೆ ಇಲ್ಲದೆ ಇರುವುದೇ ಜೀವನ
ಎಲ್ಲವನ್ನೂ ಎದುರಿಸುವುದೇ ಜೀವನ !      - ಶ್ರೀ ಹರಿ.

www.srihariakhoday.com

# ಚಿಂತನೆ

ಭೂತ-ಭವಿಷ್ಯಗಳ ಭಾವನೆಗಳಲ್ಲಿ
ತೇಲುತ್ತಿರುವ ಮಾನವನ ಮನಸ್ಸು
ತನ್ನ ಹಿನ್ನೆಲೆಯಲ್ಲಿ ನನ್ನದಾಗಬೇಕು, ನಾನು ಪಡೆಯಬೇಕು
ಪಡೆದು ಜೊತೆಗಿರಬೇಕೆಂಬ ಅರ್ಥವಿಲ್ಲದ ನಿರ್ಧಾರಗಳು!
ತನ್ನನ್ನು ತಾನೇ ಪಡೆಯಲಾಗದ ಮಾನವ
ಬೇರೆಯದನ್ನು ಪಡೆಯಲು ಮಾಡುತ್ತಿರುವ ಪ್ರಯತ್ನಗಳು
ಇಲ್ಲದ್ದನ್ನು ಕಲ್ಪಿಸಿ ಇದ್ದದ್ದರ ಜೊತೆ ತಾಪಿಸಿ
ವರ್ತಮಾನಗಳಲ್ಲಿ ಜೀವಿಸದೆ ಭವಿಷ್ಯದಲ್ಲಿ
ಜೀವನ ಯಾತ್ರೆಯನ್ನು ನಡೆಸುತ್ತಿದ್ದಾನೆ ! - ಶ್ರೀ ಹರಿ.

www.srikarikhoday.com

# ಚಿಂತನೆ

ಅರೆ ಮನಸ್ಸಿನಿಂದ ಗೋಡೆಗೆ ಮೊಳೆ ಹೊಡೆಯುವ
ಪ್ರಯತ್ನ ಬೆರಳಿಗೆ ನೋವಾಗುವುದು
ಒಂದು ರೆಕ್ಕೆಯಿಂದ ಯಾವ ಹಕ್ಕಿಯೂ ಹಾರುವುದಿಲ್ಲ
ಅರೆ ಮನಸ್ಸಿನಿಂದ ಕೆಲಸ ಕೆಲಸವಲ್ಲ
ತಮ್ಮ ಮನಸ್ಸಿನಲ್ಲಿ ತುಂಬುತನ ಬೆಳೆಸಿಕೊಳ್ಳದಿದ್ದರೆ
ಜೀವನದಲ್ಲಿ ತೃಪ್ತಿಯನ್ನು ಅನುಭವಿಸಲಾರ !
ನಮ್ಮ ಮನದಲ್ಲಿ ಒಂದು ಕಡೆ ಕಷ್ಟದ ಪಟ್ಟಿ ಮಾಡಿದರೆ
ಅದೇ ಸಮಯದಲ್ಲಿ ಸುಖದ ಪಟ್ಟಿಯನ್ನು ಮಾಡಿದರೆ
ಹೆಜ್ಜೆ ಹೆಜ್ಜೆಗೂ ಪ್ರಕೃತಿ ಸುಖವನ್ನು
ಬೆಳೆಯಲಾರಂಭಿಸುವುದು !

– ಶ್ರೀ ಹರಿ.

www.sriharikhoday.com

# ಚಿಂತನೆ

ಯಾರ ಕಲ್ಪನೆಗೂ ಬಾರದ ಮನಸ್ಸಿನ ತಪ್ಪುಗಳು
ಮುನ್ನಡೆಯುತ್ತಾ ಮುನ್ನಡೆಯುತ್ತ ತಾನು ಅಹಂಕಾರವನ್ನು
ಬೆಳೆಸಿಕೊಂಡು
ತಾನು ರಚಿಸಿಕೊಂಡಿರುವ ಯಾರೂ ಕಾಣದ
ಮಾರ್ಗದ ಮೇಲೆ
ನಾಯಕನಾಗಿ ಇದು ಮಾಡುವೆ. . ಅದು ಮಾಡುವೆ
ಮೇಲೇರುವ ಎತ್ತರ ಸಾಲದೆಂದು ಅಸೂಯೆ ಪಡುತ್ತ
ಸ್ವಪ್ರತಿಷ್ಠೆಯನ್ನು ಹೆಚ್ಚಾಗಿಸುತ್ತ, ಅತಿ ಎತ್ತರದಿಂದ ಸಣ್ಣ ತಪ್ಪಿಗೆ
ಜಾರಿ ಸರಸರನೆ ಕೆಳಗಿಳಿದಾಗ, ಮನಸ್ಸು ಬುದ್ಧಿಯ
ಆಸರೆ ಬೇಡಿ
ಜ್ಞಾನ ಭಿಕ್ಷೆಯನ್ನು ಬೇಡುತ್ತದೆ - ಶ್ರೀ ಹರಿ.

www.Sriharikhoday.com

# ಚಿಂತನೆ

ಧರೆಯಲ್ಲಿ ಹೆಜ್ಜೆ ಹೆಜ್ಜೆಗೂ ಹೆದರಿಕೆಯಿಂದ ಬದುಕುತ್ತ
ಜೀವನದಲ್ಲಿ ಜೀವನ ಕಷ್ಟಕರವಾಗಿದೆಯೆಂದು ಹೇಳುತ್ತಾ
ಹೇಳುತ್ತಾ
ಸುಖ ಏನೆಂದು ಮಾನವನಿಗೆ ಕಾಣದಾಗಿದೆ
ಜಂಭದಿಂದ ಬೇರೆಯವರ ಜೊತೆಗೆ ಬೆರೆಯದೆ
ಚಿಂತೆ ಹುಚ್ಚನ್ನು ಚಿಗುರಿಸುತ್ತ
ಅರಿವಿನ ಸುಖದಿಂದ ಯೋಗ್ಯ ಸುಖ ದೊರೆಯದೆ
ಸುಖದ ರಹಸ್ಯ ಪುಸ್ತಕದಲ್ಲಿ ಸಿಗದೆ,
ಬೇರೆಯವರಲ್ಲಿ ನನ್ನನ್ನು ಕಾಣದೆ
ಅನೇಕ ಸುಖಗಳಿಂದ ದೂರವಾಗುತ್ತಿರುವನು!

- ಶ್ರೀ ಹರಿ.

www.srikarikhoday.com

# ಚಿಂತನೆ

ದ್ವೇಶದಿಂದ ಹುಟ್ಟುತ್ತಿರುವ ಅಸೂಯೆ,
ಯಾರ ಸಲಹೆಯೂ ಕೇಳದೆ
ಅಸೂಯೆ ತನ್ನ ಪಾಡಿಗೆ ತಾನೇ ದೊಡ್ಡದಾಗುತ್ತಿದೆ !
ಒಂದು ಅಪರಾದ ಎಂದು ತಿಳಿದು ಅಸೂಯೆ
ಅಂತರಂಗದ ರೋಗ ಎಂದರೆ ಅಂಜುತ ಅಂಜುತ
ಜೀವಿಸುತ್ತಿರುವ
ಅಸೂಯೆ ಜೀವಿಗಳು ಸುಖದ ಹಾದಿಯನ್ನು ಮರೆತು
ಜಗವೇ ನುಂಗುವಂತೆ ಮಾಡುತ್ತಿರುವ ಈ ಅಂತರಂಗದ
ರೋಗ

– ಶ್ರೀ ಹರಿ.

www.srihariudaya.com

# ಚಿಂತನೆ

ನಾನು ಬೇರೆ ನೀನು ಬೇರೆ ಎಂಬ
ಅರ್ಥವಿಲ್ಲದ ಮನೋದೃಷ್ಟಿಕೋನ ಇದ್ದಲ್ಲಿ
ಜೀವನದಲ್ಲಿ ಒಂಟಿತನ ಅನುಭವಿಸುವನು !
ಒಂದು ಕಣ್ಣಿನಿಂದ ಎಲ್ಲಿ ಸರಿ ನೋಟವಿಲ್ಲವೋ ಅಲ್ಲಿ
ಜೊತೆ ಸೇರಿ ಎಲ್ಲರ ನೋಟ ನಮ್ಮ ನೋಟವಾಗಿ
ಆ ನೋಟದಲ್ಲಿ ವಿಶ್ವಾಸದ ವಿಶ್ವವನ್ನು ನೋಡೋಣ
ಹಗುರ ಮನಸ್ಸಿನಿಂದ ನಮ್ಮ ಕನಸುಗಳನ್ನು ನೋಡಿದರೆ
ನಮ್ಮ ಕನಸು ನನಸಾಗುವುದು, ನಮ್ಮ ಸಂಸಾರದಲ್ಲಿ
ಸುಖ ತರುವ ಪೂಜೆಯೇ ದುಡಿಮೆ !

– ಶ್ರೀ ಹರಿ.

www.sriharikhoday.com

# ಚಿಂತನೆ

ಅಜ್ಞಾನಕ್ಕೆ ಜ್ಞಾನವೇ ಅಸ್ತ್ರ
ತಾಯಿ ಕೊಟ್ಟ ಅಸ್ತ್ರ ಜನ್ಮತಾಃ, ನಮಗೇ ತಿಳಿಯದೆ ನೀಡಿರುವ ಅಸ್ತ್ರ
ಕಾಣದೆ ಹುಟ್ಟುವ ಅಜ್ಞಾನಕ್ಕೆ ತಾಯಿ ನೀಡಿರುವ ಜ್ಞಾನವೇ ಅಸ್ತ್ರ
ತೊಂದರೆ ಕೊಡುವ ನಾನಾ ಅಸ್ತ್ರಗಳಿಗೆ ಎದುರಾಗಿ ಜಯಗಳಿಸಲು
ತಾಯಿ ನೀಡಿರುವ ಜ್ಞಾನ ಅಸ್ತ್ರ , ಭೂತ-ಭವಿಷ್ಯ-ವರ್ತಮಾನಗಳ

www.shriharikhoday.com

# ಚಿಂತನೆ

ಜೊತೆ ಸೇರಿ ಬಾಳುವ ರೀತಿ ಕಲಿಸುವ ಜ್ಞಾನ ಅಸ್ತ್ರ
ಸಾಧ್ಯ ಸಾಧ್ಯ ನಿಜಕ್ಕೂ ಸಾಧ್ಯ ಎಂದು ಧೈರ್ಯ ನೀಡುವ
ತಾಯಿ ಅಸ್ತ್ರ
ತನ್ನಲ್ಲಿ ಸಾಧಿಸುವ ಶಕ್ತಿ ಇದೆಯೆಂಬ ಬಲವನ್ನು
ಬಲಪಡಿಸಿ ಜಯಗಳಿಸುವ ತಾಯಿ ನೀಡಿರುವ ಅಸ್ತ್ರ!

- ಶ್ರೀ ಹರಿ.

www.shriharikhoday.com

# ಚಿಂತನೆ

ಹತೋಟಿಯಿಲ್ಲದ ಮನಸ್ಸು ವೈರಾಗ್ಯ ಕಟ್ಟುತ್ತಿದೆ
ಕಟ್ಟಿದ ಮನೋಕಟ್ಟಡದಲ್ಲಿ ವೈರಾಗ್ಯ ಬೆಳೆಯುತ್ತಿದೆ !
ಪಾವಿತ್ರತೆಯ ನಿಯಮಗಳನ್ನು ಉಲ್ಲಂಘಿಸಿದರೆ
ಹುಚ್ಚನಂತೆ ಹತೋಟಿಯಿಲ್ಲದ ಮನಸ್ಸು
ಬೇರೆ ಬೇರೆ ಭಾವನೆಗಳಿಗೆ ಜನುಮ ನೀಡುತ್ತ
ಮನಸ್ಸಿನ ಗರ್ಭದಿಂದ ಆಧಾರವಿಲ್ಲದ ಭಾವನೆಗಳು
ತೃಪ್ತಿಯ ಸಂತಸವನ್ನು ಕಳೆದುಕೊಳ್ಳುತ್ತಿದೆ !

- ಶ್ರೀ ಹರಿ.

www.shikaritoday.com

# ಚಿಂತನೆ

ದಿನವೂ ನಡೆಯುತ್ತಿರುವ ಅಂತರಾಳದ ಹೋರಾಟದಲ್ಲಿ
ಗೆಲುವೂ ನಮ್ಮದೇ ಸೋಲೂ ನಮ್ಮದೇ
ದಿನವೂ ಅಪೇಕ್ಷಿಸುವ ಆಸೆಗಳ ಬೇಡಿಕೆಗಳಲ್ಲಿ
ಕೊನೆಗೆ ದೊರೆಯುವುದು ಮಾತ್ರ ದೊರೆಯುವುದು !
ಬದಲುತ್ತಿರುವ ಪ್ರಪಂಚದಲ್ಲಿ
ಹೊಸ ಹೊಸ ಆವಿಷ್ಕಾರದ ಮಿನುಗುಗಳಲ್ಲಿ
ಮನಸ್ಸಿಗೆ ಹೊಸ ಸ್ವಪ್ನಗಳು
ಸ್ವಪ್ನಗಳಿಗೆ ಹೊಸ ಹೊಸ ಕನಸುಗಳ ಸರಮಾಲೆ
ನಿಲ್ಲದೇ ಹರಿಯುತ್ತಿರುವ ನದಿಯಂತೆ !

– ಶ್ರೀ ಹರಿ.

www.sribarikhoday.com

# ಚಿಂತನೆ

ಮನೋತರ್ಕದ ಸುಳಿಗೆ ಸಿಗದೆ
ತನ್ನ ಮನೋ ಹಿಡಿತದಲ್ಲಿ ತಾನು ಸೇರಿಕೊಂಡು
ಹಳ್ಳ ದಿಣ್ಣೆಯಲ್ಲಿ ನಿಶೆ ಏರಿಸಿ ನಡೆದುಕೊಂಡು
ಜವಾಬ್ದಾರಿಗಳ ಎಚ್ಚರಿಕೆಯನ್ನು ಎಚ್ಚರಿಸಿ
ಎಲ್ಲಾ ಜಗತ್ತಿನ ಗೋಜಿನಲ್ಲಿ
ಸರಿ ಎನಿಸಿಕೊಳ್ಳುವ ಮನೋವಾತಾವರಣದಲ್ಲಿ
ಶೂನ್ಯದ ಅರ್ಥ ತಿಳಿದಿರುವ
ಜ್ಞಾನವಂತರ ಜೊತೆಗೆ ಕಾಲ ಕಳೆಯೋಣ!

– ಶ್ರೀ ಹರಿ.

www.sriharikhoday.com

# ಚಿಂತನೆ

ನಮ್ಮ ಬಳಿ ಧೈರ್ಯ ಬಳಕೆಯಿರುವಾಗ
ಮರೀಚಿಕೆಯ ಸ್ವಭಾವ ಬಿಟ್ಟು
ನಮ್ಮಿಬ್ಬರ ಜೊತೆ ಬುದ್ಧಿಯ ಶ್ರೀಮಂತಿಕೆ ಜೊತೆಯಿರುವಾಗ
ಜೊತೆ ನಿಧಾನವಾಗಿ ಯೋಚಿಸಿ ನಿನಗೆ ಹೇಳಲಿಕ್ಕೆ
ಬಾಯಿಲ್ಲದಿದ್ದರೂ
ಹೆದರಿಕೆಯನ್ನು ಹೆದರಿಸಲು ನಮ್ಮ ಹೊಣೆಗಾರಿಕೆ ಇರುವಾಗ
ಮನೋನೌಕೆಯನ್ನು ಸುಖತರುವ ಹಾಯಿಯನ್ನು
ಕಟ್ಟಿಕೊಂಡು
ಅಂಜಿಕೆ ಹೆದರಿಕೆ ಯಾವ ಕಷ್ಟಗಳನ್ನು ಯೋಚಿಸದೆ
ತಲ್ಲಣಿಸದೆ ಮುಂದೆ ಸಾಗೋಣ

– ಶ್ರೀ ಹರಿ.

www.sriharikbtoday.com

# ಚಿಂತನೆ

ಸ್ವರೂಪಗಳಿಲ್ಲದ ಸದ್ದು
ನಾವು ಕೇಳದೆ ಇದ್ದರೂ ಕೇಳಿಸುತ್ತಲೇ ಇದೆ
ಕಣ್ಣಿಗೆ ಎಂದೆಂದೂ ಕಾಣದ ಸದ್ದು ಮನದ ಕಣ್ಣಿಗೆ
ಕಾಣಿಸುತ್ತಲೇ ಇದೆ!
ನಮ್ಮ ಮನಸ್ಸು ಜೀವನದ ಮುಖ್ಯ ಹೆದ್ದಾರಿ
ಪಾತ್ರಕ್ಕೆ ತಕ್ಕಂತೆ ಹಿಂದಿನ ತೆರೆಗಳು ಪಾತ್ರಕ್ಕೆ ತಕ್ಕಂತೆ
ಕಾಣದೆ ಇರುವ ಸರಿ ಸದ್ದುಗಳು
ನಾವು ಕೇಳಿಸಿಕೊಳ್ಳುವ ರೀತಿ ಅನೇಕಗಳು..!
ಆಕಾಂಕ್ಷೆಗಳು ಹಿನ್ನಲೆಯ ತೆರೆಗಳ ಎದುರಿಗೆ
ನಮ್ಮ ಮನೋಸದ್ದು ಸದ್ದಿನ ಬಿಂಬ ಪ್ರತಿಬಿಂಬಗಳು
ತೆರೆಗಳ ಹಿಂದೆ ನಿಂತು ಕೇಳಿಸಿಕೊಳ್ಳುತ್ತಲೇ ಇದೆ...!

– ಶ್ರೀ ಹರಿ.

www.sriharikhoday.com

# ಚಿಂತನೆ

www.srilanktoday.com

ಮನಸಾರೆ ಮಾತನಾಡುವುದು ಮನಸ್ಸಿನ ಸದ್ದು
ಮನಸ್ಸಿನಲ್ಲೊಂದು . .ಹೊರಗೆ ಮತ್ತೊಂದು
ಹೊಸ ರೀತಿಯ ಮನಸ್ಸಿನ ಸದ್ದು
ತಮ್ಮ ಇರುವಿಕೆಯ ನೆಲೆಯನ್ನು ತಿಳಿಯದೆ
ತಮಗೆ ತೋಚದೆ ಇರುವುದನ್ನು ಮನಸ್ಸು ಸದ್ದನ್ನು ಮಾಡುತ್ತದೆ
ನಮ್ಮಲ್ಲಿರುವ ಸುಮ್ಮನಿರದ ಮನಸ್ಸು ಕೇಳುವ ಸದ್ದು
ಕೆಲ ಸಮಯ ಒಳ್ಳೆಯದಾಗಿ, ಕೆಲವೊಮ್ಮೆ ಕೆಟ್ಟದಕ್ಕಾಗಿರುತ್ತದೆ
ಸದ್ದು ಒಳ್ಳೆಯದನ್ನೂ ಅರಳಿಸುತ್ತದೆ, ಕೆಟ್ಟದ್ದನ್ನೂ ಅರಳಿಸುತ್ತದೆ!

– ಶ್ರೀ ಹರಿ.

# ಚಿಂತನೆ

ಮನಸಾರೆ ಮಾತನಾಡುವುದು ಮನಸ್ಸಿನ ಸದ್ದು
ಮನಸ್ಸಿನಲ್ಲೊಂದು . .ಹೊರಗೆ ಮತ್ತೊಂದು
ಹೊಸ ರೀತಿಯ ಮನಸ್ಸಿನ ಸದ್ದು
ತಮ್ಮ ಇರುವಿಕೆಯ ನೆಲೆಯನ್ನು ತಿಳಿಯದೆ
